ANANTHKUMAR PRATISHTHANA

# ಅನಂತಪಥ

ಪುಟ 8
ವ್ಯಕ್ತಿ ವಿಶೇಷ ಮಾಲಿಕೆ
ಧರ್ಮವೀರ ಛತ್ರಪತಿ ಸಂಭಾಜಿ



ಸಂಪುಟ - 5 ಮಾರ್ಚ್ - 2025 ಸಂಚಿಕೆ - 57

### 2ನೇ ಹುಟ್ಟುಹಬ್ಬದ ಸಡಗರದಲ್ಲಿ

## ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರ



ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ 2ನೇ ಹುಟ್ಟುಹಬ್ಬದ ಸಡಗರ. ಅನಂತಕುಮಾರ್ ಅವರ ವ್ಯಕ್ತಿತ್ವ ಮತ್ತು ಆದರ್ಶಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ದೇಶ ಕಾರ್ಯಕ್ಕೆ ಕೈ ಜೋಡಿಸುವ ಸ್ಥಳವಾಗಿದೆ ಹುಬ್ಬಳ್ಳಿಯ "ಅನಂತ ಪ್ರೇರಣಾ ಕೇಂದ್ರ". ಮಧ್ಯಮ ವರ್ಗದ ರೈಲ್ವೆ ನೌಕರನ ಮಗನಾಗಿ, ಹುಬ್ಬಳ್ಳಿಯ ಶಾಲೆ-ಕಾಲೇಜಿನಲ್ಲಿ ಓದಿ ತಮ್ಮ ಪರಿಶ್ರಮ ಮತ್ತು ಅಸಾಧಾರಣ ಪ್ರತಿಭೆಯಿಂದ ರಾಷ್ಟ್ರಮಟ್ಟದಲ್ಲಿ ಉನ್ನತ ಸ್ಥಾನಕ್ಕೇರಿದ ಕೀರ್ತಿ-ಸಾಧನೆ ಅನಂತಕುಮಾರ್ ಅವರದು. ತಮ್ಮ ಮಾರ್ಗದರ್ಶಕರಾದ ಗುರುಹಿರಿಯರಿಂದ ಸತ್ಪಥಗಾಮಿಯೆಂಬ ಪ್ರಶಂಸೆಯನ್ನು ಗಳಿಸಿಕೊಂಡಂತೆಯೇ ಜನಸಾಮಾನ್ಯರಿಂದಲೂ ಸಕಲರ ಹಿತಾಕಾಂಕ್ಷಿ ನಾಯಕನೆಂಬ ನಲ್ಮೆಯ ಹೊಗಳಿಕೆಗೆ ಪಾತ್ರರಾದವರು. ಪ್ರಗತಿಪಥದಲ್ಲಿ ದೇಶವನ್ನು ಮುನ್ನಡೆಸುವ ಹೊಣೆ ಹೊತ್ತ ಕಾಲದಲ್ಲೇ ಕನ್ನಡ ನಾಡು-ನುಡಿ-ಜಲಗಳ ಹಿತವನ್ನು ಕಾಪಾಡಲು ಕಂಕಣಬದ್ಧರಾಗಿದ್ದವರು. ಅಕಾಲದಲ್ಲಿ ನಾಡನ್ನು ತೊರೆದು ಹೋದರೂ ತಮ್ಮ ಗುಣಶೀಲಗಳಿಂದ, ನಿತ್ಯನೂತನವಾದ ಕರ್ತೃತ್ವ ಶಕ್ತಿಯಿಂದ, ಸದಾ ಜಾಗೃತವಾಗಿದ್ದ ರಾಷ್ಟ್ರಭಕ್ತಿಯಿಂದ ಎಲ್ಲರಿಗೂ ಮಾದರಿಯಾಗಿ, ಪ್ರೇರಕಶಕ್ತಿಯಾಗಿ ಜನಮನದಲ್ಲಿ ನೆಲೆನಿಂತವರು, ಅನಂತಕುಮಾರ್.

### ಅನಂತ ಪ್ರೇರಣಾ ಕೇಂದ್ರ

ತಮ್ಮ ಎಳೆತನದಿಂದ ಮೊದಲ್ಗೊಂಡು ಯುವನಾಯಕನಾಗಿ ರೂಪುಗೊಳ್ಳುವ ವರೆಗಿನ ಇಪ್ಪತ್ತಕ್ಕೂ ಹೆಚ್ಚು ವರ್ಷಗಳನ್ನು ಅನಂತಕುಮಾರ್ ಹುಬ್ಬಳ್ಳಿಯಲ್ಲೇ ಕಳೆದರು. ಅವರ ಯಶಸ್ಸಿನ ಪುಟಗಳನ್ನು ತೆರೆದಿಡುವ ಈ ಕೇಂದ್ರವು ಹುಬ್ಬಳ್ಳಿಯ ಹೃದಯ ಭಾಗದಲ್ಲೇ ನೆಲೆಗೊಂಡಿರುವುದು ಅತ್ಯಂತ ಸಮಂಜಸವಾಗಿದೆ. ತಮ್ಮ ಬಳಿ ಬಂದವರೆಲ್ಲರ ಕಷ್ಟಕ್ಕೆ ಸದಾ ಸ್ಪಂದಿಸುತ್ತಿದ್ದವರು, ಸಂಸದರಾಗಿ ಸಚಿವರಾಗಿ ಸಮಾಜಮುಖೀ ಅಭಿವೃದ್ಧಿಪರ ಕಾರ್ಯಗಳಲ್ಲಿ ತೊಡಗಿರುತ್ತಿದ್ದವರು, ಹಸಿರು ಜೀವನ ಶೈಲಿಯ ಹರಿಕಾರರಾಗಿದ್ದವರು ಅನಂತಕುಮಾರ್. ಅವರ ಬದುಕು ಎಲ್ಲರಿಗೂ ಸಾರ್ಥಕ ಬದುಕಿನೆಡೆಗೆ ಪ್ರೇರಣೆ ನೀಡಲೆಂಬ ಉದ್ದೇಶದಿಂದ ರೂಪುಗೊಂಡಿರುವ ಈ ಕೇಂದ್ರಕ್ಕೆ ಅನಂತ ಪ್ರೇರಣಾ ಕೇಂದ್ರವೆಂದು ಹೆಸರಿಸಿರುವುದೂ ಅರ್ಥಪೂರ್ಣವಾಗಿದೆ.

**ಕೆಲ ವಿಶೇಷ ಮಾಹಿತಿ ಇಲ್ಲಿದೆ :** ಅನಂತಕುಮಾರ್ ಅವರು ತಮ್ಮ 17ನೇ ವಯಸ್ಸಿನಲ್ಲಿ (೧೯೭೭) ವಿಸ್ತಾರಕರಾಗಿ ಕುಂದಗೋಳದಲ್ಲಿ ಪಾಳಂದೆ ಅವರ ಮನೆಯಲ್ಲಿದ್ದರು. ತಮ್ಮ ಸಂಘಟನೆಯ ಕೆಲಸಗಳ ಜೊತೆಗೆ, ಅವರು ಪ್ರತಿದಿನ ಬೆಳಿಗ್ಗೆ ಆರು ಗಂಟೆಗೆ ಎದ್ದು, ಮನೆಯವರು ಏಳುವ ಮೊದಲೇ ದೂರದ ಬಾವಿಯಿಂದ ಭಾರವಾದ ತಾಮ್ರದ ಕೊಡದಿಂದ 50 ಕೊಡ ನೀರನ್ನು ಸೇದಿ ನಂತರ ತಮ್ಮ ಕೆಲಸಗಳಲ್ಲಿ ತೊಡಗುತ್ತಿದ್ದರು ಎಂದು ಶ್ರೀ ಪಾಳಂದೆ ಅವರು ನೆನಪಿಸಿಕೊಳ್ಳುತ್ತಾರೆ. ಆ ತಾಮ್ರದ ಕೊಡವನ್ನು ಪಾಳಂದೆಯವರು ಪ್ರೇರಣಾ ಕೇಂದ್ರಕ್ಕೆ ನೀಡಿದ್ದು, ಅದನ್ನು ಅಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

1998ರಲ್ಲಿ ಕೇಂದ್ರದಲ್ಲಿ ಮೊದಲ ಬಾರಿ ವಿಮಾನಯಾನ ಸಚಿವರಾದ ಅನಂತಕುಮಾರ್ ಅವರು, ದೇಶದ ಬಹುತೇಕ ವಿಮಾನ ನಿಲ್ದಾಣಗಳಿಗೆ ಮಹಾಪುರುಷರ, ಸ್ಥಳೀಯ ನಾಯಕರ ಹೆಸರಿಡುವ ಕಾರ್ಯವನ್ನು ಕೈಗೊಂಡರು. ಮುಂಬಯಿಯ ನಿಲ್ದಾಣಕ್ಕೆ ಛತ್ರಪತಿ ಶಿವಾಜಿ ನಿಲ್ದಾಣ ಎಂದು ಹೆಸರಿಟ್ಟು, ಅಟಲ್ ಬಿಹಾರಿ ವಾಜಪೇಯಿ ಜೀ ಮತ್ತು ಶಿವಸೇನೆಯ ಬಾಳ್ ಠಾಕ್ರೆ ಅವರನ್ನು ಆಹ್ವಾನಿಸಿ ಶಿವಾಜಿ ಮೈದಾನದಲ್ಲಿ ಬೃಹತ್ ಕಾರ್ಯಕ್ರಮ ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ನೀಡಿದ ಸ್ಮರಣಿಕೆಯನ್ನು ಪ್ರದರ್ಶನಕ್ಕೆ ಇಡಲಾಗಿದೆ.



ಹುಬ್ಬಳ್ಳಿಯಿಂದಲೇ ಬೆಳೆದು ರಾಷ್ಟ್ರ ನಾಯಕರಾದ ಅನಂತಕುಮಾರರ ಪ್ರೇರಣಾದಾಯಿ ಜೀವನದ ಝಲಕ್ ಈ ಕೇಂದ್ರದಲ್ಲಿದೆ. ಎಲ್. ಕೆ. ಅಡ್ವಾಣಿ ಜೀ, ಅಟಲ್ ಬಿಹಾರಿ ವಾಜಪೇಯಿ ಜಿ ಅವರ ಜೊತೆ ಲಡಾಖ್‌ನ ಲೇಹ್ ದಲ್ಲಿ ಸಿಂಧು ನದಿಯ ಪೂಜೆಯ ಚಿತ್ರಗಳು,

ಪುಟ 7 ರಲ್ಲಿ ಮುಂದುವರಿದಿದೆ

## "ಭಾರತೀಯ ಆಡಳಿತಗಾರರ ನಾಯಕತ್ವದ ಪಾಠಗಳು"- ವಿ.ಬಿ. ಆರತೀ



2025ರ ಮಾರ್ಚ್ 15ರಂದು ಅನಂತಕುಮಾರ್ ಪ್ರತಿಷ್ಠಾನವು ಆಯೋಜಿಸಿದ್ದ "ಭಾರತೀಯ ಆಡಳಿತಗಾರರ ನಾಯಕತ್ವದ ಪಾಠಗಳು" ಎಂಬ ಉಪನ್ಯಾಸ ಸರಣಿಯ ಉದ್ಘಾಟನೆ ನಡೆಯಿತು. ಈ ಕಾರ್ಯಕ್ರಮದ ಭಾಗವಾಗಿ, 16ನೇ ಶತಮಾನದ ಧೈರ್ಯಶಾಲಿ ಕನ್ನಡತಿ ರಾಣಿ ಅಬ್ಬಕ್ಕ ಚೌಟ ಅವರ ಕುರಿತಾದ ಉಪನ್ಯಾಸವು ಅದಮ್ಯ ಚೇತನ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ವಿಭು ಅಕಾಡೆಮಿಯ ಸಂಸ್ಥಾಪಕರಾದ ಡಾ. ವಿ. ಬಿ. ಆರತೀ ಅವರು ರಾಣಿ ಅಬ್ಬಕ್ಕ ಅವರ ಜೀವನ, ಸಾಧನೆ ಮತ್ತು ನಾಯಕತ್ವದ ಬಗ್ಗೆ ವಿವರವಾಗಿ ಮಾತನಾಡಿದರು. ರಾಣಿ ಅಬ್ಬಕ್ಕನ ಸೈನ್ಯ ಸಣ್ಣದಿದ್ದರೂ ನಾಯಕತ್ವದ ಗುಣಗಳಾದ ಧೈರ್ಯ, ಸ್ವಾಭಿಮಾನ, ಸಮಯಪ್ರಜ್ಞೆ, ದೂರದೃಷ್ಟಿ ಮತ್ತು ಸಂಘಟನಾ ಕೌಶಲ್ಯಗಳಿಂದ ಯುದ್ಧದಲ್ಲಿ ಹೇಗೆ ವಿಜಯಶಾಲಿಯಾದರು ಎಂದು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ರಾಣಿ ಅಬ್ಬಕ್ಕ ಅವರು ತಮ್ಮ ಪ್ರಜೆಗಳ ರಕ್ಷಣೆಗಾಗಿ ಮತ್ತು ತಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿವರಗಳು ಎಲ್ಲರಿಗೂ ಸ್ಫೂರ್ತಿ ನೀಡಿದವು. ಈ ಸಂದರ್ಭದಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಪಿ. ವಿ. ಕೃಷ್ಣಭಟ್, ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮೊದಲಾದ ಗಣ್ಯರ ಜೊತೆಗೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನಾಡಕಲಸಿಯ ಜೋಡಿ ದೇಗುಲಗಳು

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್



ನಮ್ಮ ನಾಡಿನ ಯಾವುದೇ ಪುರಾತನ ದೇವಾಲಯವನ್ನು ನೋಡುವಾಗ ಅದು ಕೇವಲ ತತ್ಕಾಲದ ಒಂದು ಧಾರ್ಮಿಕ ಕ್ಷೇತ್ರವಾಗಿತ್ತೆಂದು ಭಾವಿಸುವುದು ತಪ್ಪಾಗುತ್ತದೆ. ಅಂತಹ ದೇವಾಲಯವು ತನ್ನ ನಿರ್ಮಾಣಕಾಲದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂದರ್ಭಗಳನ್ನೂ ಪ್ರತಿನಿಧಿಸುತ್ತಿರಬಹುದೆಂಬ ದೃಷ್ಟಿಯಿಂದ ನೋಡುವಾಗ ಅನೇಕ ಹೊಸ ಅಂಶಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ಪೂರಕವಾದ ಶಾಸನ ಮತ್ತಿತರ ದಾಖಲೆಗಳ ಪರಿಶೀಲನೆಯಿಂದ ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳೂ ಮನದಟ್ಟಾಗುತ್ತವೆ.

ಶಿವಮೊಗ್ಗ ಜಿಲ್ಲೆಯ ಸಾಗರದ ಆಸುಪಾಸಿನಲ್ಲಿ ಹೀಗೆ ಅಂದಿನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಅನೇಕ ದೇವಾಲಯಗಳನ್ನು ಕಾಣಬಹುದು. ಇಂಥ ಕೇಂದ್ರಗಳಲ್ಲಿ ಕೆಳದಿ, ಇಕ್ಕೇರಿಗಳಂತೆ ಪ್ರಸಿದ್ಧಿಪಡೆದ ಊರುಗಳಲ್ಲದೆ ನಾಡಕಲಸಿಯಂತಹ ಅಜ್ಞಾತಗ್ರಾಮವೂ ಸೇರುತ್ತದೆ. ಸಾಗರದಿಂದ ಹತ್ತು ಕಿ.ಮೀ. ದೂರದಲ್ಲಿರುವ ಈ ಹಳ್ಳಿಯನ್ನು ಕೆಳದಿಯ ಕಡೆಯಿಂದಲೂ ತಲುಪಬಹುದು. ಇಂದಿಗೆ ಸಾಧಾರಣಗ್ರಾಮದಂತೆ ತೋರುವ ಈ ಪ್ರದೇಶವು ಒಂದು ಕಾಲಕ್ಕೆ ಕಲಸೆನಾಡು ಎಂದು ಪ್ರಸಿದ್ಧಿಪಡೆದ ಪ್ರಾಂತ್ಯದ ರಾಜಧಾನಿಯಾಗಿತ್ತು. ಹನ್ನೆರಡನೆಯ ಶತಮಾನದಲ್ಲಿ ಈ ಪ್ರದೇಶವು ಹೊಯ್ಸಳರ ಆಧಿಪತ್ಯಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೨೧೮ರಲ್ಲಿ ಬಾಳೆಯಮ್ಮ ಪೆಗ್ಗಡೆಯೆಂಬ ಸ್ಥಳೀಯ ಅರಸನು ಇಲ್ಲಿ ದೇಗುಲಗಳನ್ನು ಕಟ್ಟಿಸಿದನು. ರಾಮೇಶ್ವರ ಹಾಗೂ ಮಲ್ಲಿಕಾರ್ಜುನದೇವರ ಈ ದೇಗುಲಗಳು ಅಕ್ಕಪಕ್ಕದಲ್ಲಿದ್ದು ಹೊಯ್ಸಳಶೈಲಿಯ ನಿರ್ಮಿತಿಗಳಾಗಿವೆ.




ಆವರಣದೊಳಗೆ ಕಾಲಿಟ್ಟೊಡನೆ ಕಾಣುವ ಗುಡಿ ರಾಮೇಶ್ವರ ದೇವರದು. ಪ್ರವೇಶದ್ವಾರದ ಸೋಪಾನದ ಅಕ್ಕಪಕ್ಕ ಒಂದೆಡೆ ಆನೆಯೂ ಇನ್ನೊಂದೆಡೆ ನಂದಿಯೂ ಇರುವುದನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಆದರೆ ಅಲ್ಲಿರಬೇಕಾಗಿದ್ದ ಆನೆಯೊಂದು ಭಗ್ನವಾದ ಕಾರಣ ಖಾಲಿಯಿದ್ದ ಜಾಗದಲ್ಲಿ ಮತ್ತೆಲ್ಲೋ ಇದ್ದ ನಂದಿಯನ್ನು ಕರೆತಂದು ಕೂರಿಸಲಾಗಿದೆ, ಅಷ್ಟೆ. ಗುಡಿಯ ಕಕ್ಷಾಸನದ (ಒರಗು ಜಗಲಿ) ಹೊರಭಾಗದ ಪಟ್ಟಿಕೆಯ ಮೇಲೆ ಅನೇಕ ಮಿಥುನಶಿಲ್ಪಗಳಿರುವುದೊಂದು ವಿಶೇಷ. ಇದೇ ಪಟ್ಟಿಕೆಯಲ್ಲಿ ಜೀರ್ಕೊಳವೆಗಳನ್ನು ಹಿಡಿದು ಓಕುಳಿಯಾಡುತ್ತಿರುವ ಗೋಪಿಕೆಯರ ದೃಶ್ಯ ಮೋಹಕವಾಗಿದೆ. ಆಯತಾಕಾರದ ಕಿರುಗೋಡೆ ಇಡಿಯ ಮುಖಮಂಟಪವನ್ನು ಸುತ್ತುವರೆದಿದೆ. ಕೆಳಭಾಗದ ಪಟ್ಟಿಕೆಗಳಲ್ಲಿ ಕಿರುಗೋಪುರಗಳನ್ನೂ ಕಂಬವಿನ್ಯಾಸಗಳನ್ನೂ ಮೂಡಿಸಿದೆ. ದೇಗುಲದೊಳಕ್ಕೆ ಕಾಲಿರಿಸಿದ ಕೂಡಲೇ ಶಿವನಿಗೆ ಅಭಿಮುಖನಾಗಿ ಕುಳಿತ ನಂದಿ ಕಾಣುತ್ತದೆ. ಸುತ್ತಲೂ ಒರಗುಜಗಲಿ. ಜಗುಲಿಯ ಮೇಲಿನ ಕಿರುಗಂಬಗಳೂ ನವರಂಗದ ಕಂಬಗಳೂ ತಿರುಗಣೆಯಿಂದ ಮಾಡಿದ್ದು ಅವುಗಳ ಮೇಲಿನ ಕೆತ್ತನೆಚಿತ್ತಾರಗಳು ಸೊಗಸಾಗಿವೆ.

ಶಿವಲಿಂಗವಿರುವ ಗರ್ಭಗುಡಿಯ ಸುತ್ತ ಕಿರಿದಾದ ಪ್ರದಕ್ಷಿಣಾಪಥವಿರುವುದು ವಿಶೇಷ. ಬೇರಾವ ಹೊಯ್ಸಳ ದೇಗುಲದಲ್ಲೂ ಈ ಮಾದರಿ ಕಾಣದು. ಹೊರಗಿನ ಕೋಷ್ಠದಲ್ಲಿ ಇರಿಸಿರುವ ಗಣೇಶ ಮತ್ತು ಮಾಧವನ ಮೂರ್ತಿಗಳು ಭಗ್ನವಾಗಿದ್ದರೂ ಸುಲಕ್ಷಣವಾಗಿವೆ. ದೇಗುಲಕ್ಕೆ ಏಳು ತಲದ ಮೆಟ್ಟಿಲುಮೆಟ್ಟಿಲಾದ ಶಿಖರವಿದ್ದು ಶುಕನಾಸಿಯ ಮುಂಭಾಗದಲ್ಲಿ ತಾಂಡವಶಿವನ ಮೂರ್ತಿ ಕಂಡುಬರುತ್ತದೆ. ಮಲ್ಲಿಕಾರ್ಜುನ ದೇವಾಲಯಕ್ಕೆ ಶಿಖರವಿಲ್ಲ. ರಾಮೇಶ್ವರ ಗುಡಿಗಿಂತ ವಿಸ್ತೀರ್ಣದಲ್ಲಿ ದೊಡ್ಡದಾದ ಈ ಗುಡಿ ನಕ್ಷತ್ರಾಕಾರದ ತಳಹದಿ ಹೊಂದಿದ್ದು ತೆರೆದ ಮಂಟಪದ ಕಕ್ಷಾಸನವೂ ನಕ್ಷತ್ರದ ಆಕಾರದಲ್ಲೇ ಮುಂದುವರೆದಿದೆ. ಮೂರು ಕಡೆ ತೆರೆದ ಬಾಗಿಲು. ಮುಂಭಾಗದ ಬಾಗಿಲಲ್ಲೇ ದೊಡ್ಡ ನಂದಿ ಶಿವನಿಗೆ ಅಭಿಮುಖನಾಗಿ ಕುಳಿತಿದ್ದಾನೆ. ನಂದಿಯ ಸಾಲಂಕೃತ ಶಿಲ್ಪ ಮುದ್ದಾಗಿದೆ. ನಂದಿಯ ಕಣ್ಣು, ಕಿವಿ, ಮುಖ, ಗಂಗೆದೊಗಲುಗಳ ಮೇಲೆ ಮೂಡಿಸಿರುವ ಗೆರೆಗಳು ವಿಶಿಷ್ಟವಾಗಿವೆ. ಕೊರಳ ಸರ, ಕಿರುಗಂಟೆಗಳ ಹಾರ ಆಕರ್ಷಕವಾಗಿದೆ. ಕಕ್ಷಾಸನದ ಕಿರುಗಂಬಗಳೂ ಮಂಟಪದ ದೊಡ್ಡಕಂಬಗಳೂ ವಿಭಿನ್ನ ಕೆತ್ತನೆಯ ವಿನ್ಯಾಸಗಳಿಂದ ಗಮನಸೆಳೆಯುತ್ತವೆ. ಗರ್ಭಗುಡಿಯಲ್ಲಿ ಸಪಾಟಾದ ನೆತ್ತಿಯ ಶಿವಲಿಂಗ. ಒಳಗುಡಿಯ ದೇವಕೋಷ್ಠಗಳಲ್ಲಿ ಗಣಪತಿ, ಮಹಿಷಮರ್ದಿನಿ, ವೀರಭದ್ರ ಹಾಗೂ ಸಪ್ತಮಾತೃಕೆಯರ ಮೂರ್ತಿಗಳಿವೆ. ಎಮ್ಮೆಯ ದೇಹದಿಂದ ನಿಜರೂಪದಲ್ಲಿ ಹೊರಬರುತ್ತಿರುವ ಅಸುರನನ್ನು ಕೊಲ್ಲುತ್ತಿರುವ ದುರ್ಗೆಯ ವಿಗ್ರಹ ತುಸುಭಗ್ನವಾಗಿದ್ದರೂ ಈ ಮಾದರಿಯ ಉತ್ತಮಶಿಲ್ಪವಾಗಿ ವ್ಯಕ್ತಪಡುತ್ತದೆ. ತಾವರೆಯ ಮೇಲೆ ಎಡಗಾಲು ಮಡಿಸಿಕೊಂಡು ಕುಳಿತ ಗಣೇಶನ ಪ್ರತಿಮೆ ಸುಂದರವಾಗಿದೆ. ಸಪ್ತಮಾತೃಕೆಯರು ತಂತಮ್ಮ ವಾಹನಸಮೇತರಾಗಿ ಕುಳಿತಿರುವುದೊಂದು ವಿಶೇಷ. ಒಳಗುಡಿಯ ಬಾಗಿಲ ಪಕ್ಕದ ಲಂಬವಾದ ಜಾಲಂದ್ರದ ಮೇಲೆ ನರ್ತಕರು ಹಾಗೂ ವಾದ್ಯಗಾರರನ್ನು ಚಿತ್ರಿಸಲಾಗಿದ್ದು ಕಿಟಕಿಯು ವಿಶಿಷ್ಟ ಕೆತ್ತನೆಯಿಂದಾಗಿ ಸೊಗಸಾಗಿ ಕಾಣುತ್ತದೆ.

ದೇಗುಲದ ಹೊರಗೆ ಹಲವು ನಾಗರಕಲ್ಲು, ವೀರಗಲ್ಲುಗಳೂ ಇದ್ದು ಅಧ್ಯಯನಾಸಕ್ತರಿಗೆ ಉಪಯುಕ್ತ ಮಾಹಿತಿ ನೀಡಬಲ್ಲವು. ಸಾಗರದ ಆಸುಪಾಸಿನ ಕೆಳದಿ, ಇಕ್ಕೇರಿ, ವರದಹಳ್ಳಿ ಮೊದಲಾದ ಪ್ರಸಿದ್ಧ ತಾಣಗಳಿಗೆ ಭೇಟಿನೀಡುವವರು ಐತಿಹಾಸಿಕ ಮಹತ್ವದ ನಾಡಕಳಸಿಗೂ ಬಂದು ಇಲ್ಲಿನ ಪುರಾತನ ದೇಗುಲಗಳನ್ನು ವೀಕ್ಷಿಸುವರೆಂಬುದು ನಮ್ಮ ಆಶಯ.

**ಸೌಜನ್ಯ : ಆಕಾಶವಾಣಿ, ಮೈಸೂರು**







## ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಏನೇ ಇರಲಿ, ಪೋಲಿಸ್ ಬರಲಿ!

**ಅಧ್ಯಾಯ-32**

ಡಿಸೆಂಬರ್ 8, 1975 ರಂದು ಸತ್ಯಾಗ್ರಹ ಹೂಡಿ ಸೆರೆಮನೆಗೆ ಸೇರುವುದೆಂದು ಅನಂತಕುಮಾರ ಮತ್ತವರ ಬಳಗಕ್ಕೆ ಸೂಚನೆ ಕೊಡಲಾಗಿತ್ತು. ಅದಕ್ಕೆ ಪೂರ್ವಭಾವಿ ಸಿದ್ಧತೆಗಳು, ಬೈಠಕ್ ಗಳು ನಡೆಯತೊಡಗಿದವು. ಯಾರ್‍ಯಾರು ಹೊರಡುವುದು, ಎಷ್ಟು ಜನ ಮೊದಲಾದ ವಿಷಯಗಳ ಬಗೆಗೆ ಚರ್ಚೆ ನಡೆಯುತ್ತಲೇ ಇತ್ತು. ಬೇರೆ ಬೇರೆ ಕಾಲೇಜುಗಳಿಂದ ಕನಿಷ್ಠ ಇಪ್ಪತ್ತು ಜನರಾದರೂ ಹೊರಡಬೇಕು ಎಂದು ಒಂದು ನಿರ್ಣಯವಾಯಿತು.

ಕಾಮರ್ಸ್ ಕಾಲೇಜಿನಿಂದ ಉಮಾ ಮಹೇಶ್ವರ್, ಕೆ.ಎಂ.ಸಿ.ಯಿಂದ ಪಾಂಡುರಂಗ ನಾಯಕ್, ಕಾಡಸಿದ್ಧೇಶ್ವರ ಕಾಲೇಜಿನಿಂದ ಪ್ರಮೋದ್ ದಿವಟೆ ಸತ್ಯಾಗ್ರಹಿಗಳ ಪಟ್ಟಿಗೆ ಸೇರಿಕೊಂಡರು. ಪಿ.ಸಿ. ಜಾಬಿನ್ ಕಾಲೇಜಿನಿಂದ ವಿಷ್ಣುಕಾಂತ ಚಟಪಲ್ಲಿ, ಅನಂತಕುಮಾರ, ಅಚ್ಯುತ ಲಿಮಯೆ ಮತ್ತು ಪ್ರದೀಪ್ ಮಜುಂದಾರ್ ಸಿದ್ಧರಾಗಿದ್ದರು. ಗುರುರಾಜ ಮುತಾಲಿಕ್, ಆನಂದ ದೇಸಾಯಿ, ಶ್ಯಾಮ ಕಾಪಸೆ, ರಾಮಚಂದ್ರ ಕಬಾಡಿ, ರಮೇಶ ಗುಡ್ಡಭಟ್ಟ, ಗೋಪಾಲ ವಸಂತರಾವ್ ಇವರು ಇನ್ನುಳಿದ ಸದಸ್ಯರು. ಹದಿನಾರು ವರ್ಷದ ಅನಂತಕುಮಾರನೇ ಎಲ್ಲರಿಗಿಂತ ಕಿರಿಯ. ಉಳಿದವರೆಲ್ಲ ಹದಿನೆಂಟರಿಂದ ಇಪ್ಪತ್ತೊಂದು ವರ್ಷ ಪ್ರಾಯದವರು. ಐ.ಟಿ.ಐ. ಕಾಲೇಜಿನ ಉದ್ಯೋಗಿ ನರಹರಿ ಫಡಕೆಯವರು ಗುಂಪಿನ ಹಿರಿಯರು. ಉಳಿದವರಿಗೆಲ್ಲ ಮಾರ್ಗದರ್ಶಕರು ಅವರೇ; ಜೊತೆಗೆ ಇಪ್ಪತ್ತೈದು ವರ್ಷ ವಯಸ್ಸಿನವರಾದ್ದರಿಂದ ಫಡಕೆಯವರಿಗೆ ಹಿರಿಯನ ಪಟ್ಟ.


ಅಂತೂ ಸತ್ಯಾಗ್ರಹಿಗಳ ಪಟ್ಟಿಯಲ್ಲಿ ಉಳಿದವರು ಹದಿನಾಲ್ಕು ಜನ. ಉಳಿದ ಕೆಲವು ಕಾಲೇಜುಗಳಿಂದ ಯಾರೂ ಬರಲಿಲ್ಲ. ಸುಮ್ಮನೆ ನಾವು ಸತ್ಯಾಗ್ರಹ ಮಾಡುತ್ತಿದ್ದೇವೆ, ಸೆರೆಮನೆಗೆ ಹೋಗುತ್ತಿದ್ದೇವೆ ಎಂದರೆ ಎಲ್ಲರಿಗೂ ಗೊತ್ತಾಗುವುದು ಹೇಗೆ? ಎಲ್ಲರಿಗೂ ಗೊತ್ತಾಗಬೇಕು. ಆಯಾ ಕಾಲೇಜಿನ ವಿದ್ಯಾರ್ಥಿಗಳೆಲ್ಲ ನೋಡುವ ಹಾಗಿರಬೇಕು. ಸಾಮಾನ್ಯವಾಗಿ ಅಪರಾಹ್ನ ಒಂದು ಗಂಟೆಯಿಂದ ಒಂದೂವರೆಯ ತನಕ ಊಟದ ಸಮಯ. ಆಗ ಎಲ್ಲ ವಿದ್ಯಾರ್ಥಿಗಳೂ ತರಗತಿಗಳಿಂದ ಹೊರಗೆ ಬಂದಿರುತ್ತಾರೆ. ಆ ಸಮಯದಲ್ಲಿ ಜೋರಾಗಿ ಘೋಷಣೆ ಕೂಗಬೇಕು. ಆಗ ಅದನ್ನು ಕೇಳಿ ಅತ್ತಿತ್ತ ಹೋಗಿದ್ದವರೂ ಬಂದು ಸೇರುತ್ತಾರೆ. ಅವರೆಲ್ಲರನ್ನೂ ಉದ್ದೇಶಿಸಿ ತಮ್ಮ ಸತ್ಯಾಗ್ರಹವನ್ನು ಕುರಿತು ಭಾಷಣ ಮಾಡಬೇಕು. ಸ್ವಯಂಪ್ರೇರಣೆಯಿಂದ ಬಂಧನಕ್ಕೆ ಒಳಗಾಗುತ್ತಿರುವುದಾಗಿ ಎಲ್ಲರಿಗೂ ತಿಳಿಸಿ ಹೇಳಬೇಕು. ಕಾಲೇಜಿನಿಂದ ಪ್ರಿನ್ಸಿಪಾಲರು ಫೋನ್ ಮಾಡಿ ಪೋಲೀಸರನ್ನು ಕರೆಸುವವರೆಗೆ ಸಭೆ, ಪ್ರತಿಭಟನೆ ಮುಂದುವರಿಸಲು ಅವಕಾಶ ಸಿಗುತ್ತದೆ. ಆ ಸಮಯದಲ್ಲಿ ತುರ್ತುಪರಿಸ್ಥಿತಿ ಜಾರಿಯಾದಾಗಿನಿಂದ ಆವರೆಗೆ ದೇಶದಲ್ಲಿ ಆಗಿರುವ ದಬ್ಬಾಳಿಕೆ ಮತ್ತದರ ಪರಿಣಾಮಗಳನ್ನು ವಿದ್ಯಾರ್ಥಿಗಳಿಗೆ ವಿವರವಾಗಿ ತಿಳಿಸಬೇಕು. ಇವಿಷ್ಟು ಸತ್ಯಾಗ್ರಹಿಗಳ ಕಾರ್ಯಕ್ರಮದ ರೂಪರೇಷೆ.

ಈ ರೂಪರೇಷೆಯಲ್ಲಿ ಸತ್ಯಾಗ್ರಹಿಯಾದವನು ಮನೆಯಿಂದ ಹೊರಟುಬರುವಾಗ ತನ್ನ ತಂದೆತಾಯಿಯರಿಗೆ ತಾನು ಅಂದು ಜೈಲು ಸೇರಲಿರುವ ವಿಷಯವನ್ನು ಹೇಳಿ ಬರಬೇಕು ಎಂಬುದು ಸೇರಿರಲಿಲ್ಲವೆಂದು ತೋರುತ್ತದೆ. ಅನಂತಕುಮಾರ್ ಒಬ್ಬನನ್ನು ಹೊರತುಪಡಿಸಿ ಉಳಿದವರು ಯಾರೂ ತಮ್ಮ ಮನೆಗಳಲ್ಲಿ ಈ ವಿಷಯವನ್ನು ಹೇಳಹೋಗಲಿಲ್ಲ. ಕಾಲೇಜಿಗೆ ಹೋಗುತ್ತೇವೆ ಎಂದಷ್ಟೇ ಹೇಳಿ ಬಂದಿದ್ದರು.

ಎಲ್ಲ ಕಾಲೇಜುಗಳಲ್ಲೂ ಬೆಳಗ್ಗೆ ಬೇಗನೆ ಹೋಗಿ ಕರಪತ್ರಗಳನ್ನು ಇಟ್ಟುಬರುವ ಕೆಲಸವಂತೂ ಆಯಿತು. ಈ ಹಿಂದೆ ಹಂಚಿಕೆಯಾಗಿದ್ದ ಪತ್ರಿಕೆಗಳಿಗಿಂತ ಈ ಕರಪತ್ರದಲ್ಲಿದ್ದ ಒಕ್ಕಣೆ ಬೇರೆ ರೀತಿಯಿತ್ತು: "ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಸತ್ಯಾಗ್ರಹಿಗಳಾದ ನಾವು ಬಂಧನಕ್ಕೆ ಒಳಗಾಗುತ್ತಿದ್ದೇವೆ. ಇದಕ್ಕೆ ನಿಮ್ಮೆಲ್ಲರ ಬೆಂಬಲ ಕೊಡಬೇಕಾಗಿ ವಿನಂತಿ." ಎಷ್ಟು ಹೊತ್ತಿಗೆ, ಯಾರು ಬಂಧನಕ್ಕೆ ಒಳಗಾಗುವರು ಎಂಬ ಸೂಚನೆ ಇಲ್ಲದ್ದರಿಂದ ವಿದ್ಯಾರ್ಥಿ ಸಮುದಾಯಕ್ಕೆ ಇದೊಂದು ವಿಸ್ಮಯದ ವಿಷಯವೆನ್ನಿಸಿರಬಹುದು.

ಒಂದು ಗಂಟೆಗೆ ಸರಿಯಾಗಿ ಗಂಟೆ ಹೊಡೆದ ಸದ್ದು ಕೇಳತೊಡಗಿತು. ಇದು ತರಗತಿ ಮುಗಿಯುವಾಗ ಸಾಮಾನ್ಯವಾಗಿ ಕೇಳಿಬರುವ ಗಂಟೆಯ ಸದ್ದಾಗಿರಲಿಲ್ಲ. ಸುದೀರ್ಘವಾದ ಗಂಟೆಯ ಮೊಳಗು. ಗಂಟೆ ಹೊಡೆದ ಪ್ರದೀಪನ ತಂತ್ರ ಫಲಿಸಿತ್ತು. ಬರಿಯ ವಿದ್ಯಾರ್ಥಿಗಳೇನು, ಪ್ರಿನ್ಸಿಪಾಲರು, ಉಪನ್ಯಾಸಕರಾದಿಯಾಗಿ ಎಲ್ಲರೂ ಓಡಿ ಬಂದರು. ಜಾಬಿನ್ ಕಾಲೇಜಿನ ಕಟ್ಟಡದ ಎದುರಿಗೆ ಒಂದು ಧ್ವಜಸ್ತಂಭ. ಆ ಸ್ತಂಭದ ಮೆಟ್ಟಿಲ ಮೇಲೆ ಈ ಸತ್ಯಾಗ್ರಹಿಗಳು ಹೋಗಿ ನಿಂತರು. ಗಂಟೆಯ ಸದ್ದಿಗೆ ಧಾವಿಸಿ ಬಂದವರನ್ನು ಉದ್ದೇಶಿಸಿ ಅನಂತಕುಮಾರ್ ಮಾತನಾಡತೊಡಗಿದರು.

ಬಹುಶಃ ಅಷ್ಟು ದೊಡ್ಡ ಸಮುದಾಯದ ಮುಂದೆ ನಿಂತು ಅನಂತಕುಮಾರ್ ಭಾಷಣ ಮಾಡಿದ್ದು ಅದೇ ಮೊದಲು. ಪ್ರೌಢಶಾಲಾ ಹಂತವನ್ನು ಮುಗಿಸಿ ಕಾಲೇಜು ಮೆಟ್ಟಿಲು ಏರಿ ಇನ್ನೂ ಆರು ತಿಂಗಳೂ ಆಗಿರಲಿಲ್ಲ . ಅಷ್ಟರಲ್ಲಿ ತುರ್ತುಪರಿಸ್ಥಿತಿ ಬಂದು ಭೂಗತ ಹೋರಾಟ ಶುರುವಾಗಿ ಅನಂತಕುಮಾರ ತರಗತಿಗಳಿಗೆ ಹಾಜರಾಗಿದ್ದು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಅಲ್ಲಿ ಸೇರಿದ್ದ ವಿದ್ಯಾರ್ಥಿಗಳಲ್ಲಿ ಅನೇಕರು ಅನಂತಕುಮಾರನನ್ನು ಅದೇ ಮೊದಲ ಬಾರಿಗೆ ನೋಡಿದ್ದಿರಬಹುದು. ತುರ್ತುಪರಿಸ್ಥಿತಿಯ ಅನಾಹುತಗಳನ್ನು, ದೇಶದ ಮೇಲಾದ ದುಷ್ಪರಿಣಾಮಗಳನ್ನು ಕುರಿತು ಅನಂತಕುಮಾರ್ ಬಹು ಸೊಗಸಾಗಿ ಮಾತನಾಡಿದರು. ಪ್ರಿನ್ಸಿಪಾಲರೂ ಸೇರಿದಂತೆ ಅಲ್ಲಿದ್ದವರೆಲ್ಲ ಆ ಭಾಷಣವನ್ನು ಶ್ರದ್ಧೆಯಿಂದಲೋ ಎನ್ನುವಂತೆ ಆಲಿಸಿದರು.



ಅನಂತಕುಮಾರನ ಭಾಷಣದ ನಂತರ ಅಚ್ಯುತ ಲಿಮಯೆ, ವಿಷ್ಣುಕಾಂತ ಚಟಪಲ್ಲಿ ಎರಡುಮೂರು ನಿಮಿಷ ತಮ್ಮ ಸತ್ಯಾಗ್ರಹವನ್ನು ಕುರಿತು ಹೇಳಿದರು. ಅವರೇನೂ ದೊಡ್ಡ ಮಾತುಗಾರರಲ್ಲ. ಪೋಲೀಸರು ಬರುವತನಕ ಕಾರ್ಯಕ್ರಮ, ಮಾತು, ಘೋಷಣೆ ಮುಂದುವರಿಯಬೇಕಾಗಿತ್ತಲ್ಲ, ಅನಂತಕುಮಾರರೇ ಮತ್ತೆ ಮಾತಿಗೆ ನಿಂತರು. ಅಷ್ಟರಲ್ಲಿ ಪ್ರಿನ್ಸಿಪಾಲರು ಅವರಲ್ಲಿಗೆ ಬಂದು ನಿಂತರು.

ಪ್ರಿನ್ಸಿಪಾಲರಾದ ಶ್ರೀ ಚಂದ್ರಶೇಖರ ಬೆಲ್ಲದ್ ರವರು ತುಂಬ ಒಳ್ಳೆಯ ವ್ಯಕ್ತಿ. ಗಣಿತ ವಿಷಯದ ಪ್ರಾಧ್ಯಾಪಕರು. ಆ ಹುಡುಗರನ್ನು ಸಂತೈಸುವ ರೀತಿಯಲ್ಲಿ ಮಾತನಾಡಿದರು. "ನೀವು ಯಾಕೆ ಹೀಗೆ ಮಾಡ್ತಾ ಇದ್ದೀರಪ್ಪಾ, ಏನೋ ತಪ್ಪಾಗಿ ಹೀಗೆ ವರ್ತಿಸಿರಬಹುದು, ನಿಮ್ಮ ಉದ್ದೇಶ ಹೀಗೆಲ್ಲ ಮಾಡಬೇಕು ಅಂತ ಇರಲಿಕ್ಕಿಲ್ಲ, ಈಗ ನೀವು ತರಗತಿಗೆ ಹೋಗಿ, ಉಳಿದ ಹುಡುಗರನ್ನೂ ಕ್ಲಾಸಿಗೆ ಕಳುಹಿಸೋಣ. ಇದೆಲ್ಲ ಮಾಡಬೇಡಿರಪ್ಪಾ" ಎಂದು ಬಹು ದೈನ್ಯದಿಂದಲೇ ಎನ್ನುವಂತೆ ಕೇಳಿಕೊಂಡರು. "ಇಲ್ಲ ಸರ್. ನಾವು ಸತ್ಯಾಗ್ರಹ ಮಾಡಲಿಕ್ಕೆಂದೇ ಬಂದಿದ್ದೇವೆ. ನಾವು ಬಂಧನಕ್ಕೊಳಗಾಗಲೇ ಬೇಕು. ನೀವು ಪೋಲೀಸರನ್ನು ಕರೆಯಿರಿ. ಅವರು ನಮ್ಮನ್ನು ಅರೆಸ್ಟ್ ಮಾಡಿ ಕರೆದುಕೊಂಡು ಹೋಗಲಿ. ನಾವೇ ಹೇಳ್ತಾ ಇದ್ದೇವೆ, ಪೋಲೀಸರನ್ನು ಕರೆಯಿಸಿ" ಎಂದು ಈ ಸತ್ಯಾಗ್ರಹಿಗಳು ತಮ್ಮ ನಿಲುವನ್ನು ವಿವರಿಸತೊಡಗಿದರು. ಎಲ್ಲ ವಾಗ್ವಾದಗಳ ನಡುವೆ ಇವರದ್ದೊಂದು ಸಮರ್ಥನೆ, ಪ್ರಿನ್ಸಿಪಾಲರ ಮನವಿ ಮುಂದುವರಿದೇ ಇತ್ತು.

ಇಷ್ಟರಲ್ಲಿ ಇನ್ನೂ 15-20 ನಿಮಿಷಗಳು ಕಳೆದವು. ಪ್ರಿನ್ಸಿಪಾಲರು ಉಳಿದ ಮಕ್ಕಳತ್ತ ತಿರುಗಿ "ನಡೀರಿ ನಿಮ್ಮ ನಿಮ್ಮ ಕ್ಲಾಸ್ ಗಳಿಗೆ ಹೋಗಿ" ಎಂದು ಆದೇಶಿಸತೊಡಗಿದರು. ಒಬ್ಬರಾದರೂ ಅಲ್ಲಿಂದ ಅಲುಗಾಡಬೇಕಲ್ಲ! ಒಂದು ಸಾವಿರದಷ್ಟಿದ್ದ ಮಕ್ಕಳು ಗುಂಪುಗೂಡಿ ನಿಂತೇ ಇದ್ದರು. ಕ್ಲೈಮ್ಯಾಕ್ಸ್ ನೋಡದಿದ್ದರೆ ಹೇಗೆ? ಅಲ್ಲಿ ಗುಂಪುಗೂಡಿದ್ದ ಅಧ್ಯಾಪಕರೂ ಪರೋಕ್ಷವಾಗಿ ಸತ್ಯಾಗ್ರಹಿಗಳನ್ನು ಬೆಂಬಲಿಸುವಂತೆ ಅಲ್ಲೇ ನಿಂತಿದ್ದರು. ಪ್ರಿನ್ಸಿಪಾಲರು ವಿದ್ಯಾರ್ಥಿಗಳನ್ನೆಲ್ಲ ತರಗತಿಗೆ ಹಿಂತಿರುಗುವಂತೆ ಹೇಳುತ್ತಿದ್ದರೆ ಅಧ್ಯಾಪಕರು ಮಾತ್ರ ಏನೂ ಹೇಳದೆ ಸುಮ್ಮನೇ ಇದ್ದರು.

ಪುಟ 4 ರಲ್ಲಿ ಮುಂದುವರಿದಿದೆ

# ಪರೋಪಕಾರವೇ ಪ್ರಮುಖ ಧ್ಯೇಯ!

## ಅನಂತಪಥ- ಒಂದು ಅಭಿಪ್ರಾಯ



ಶಶಿಧರ ಹಾಲಾಡಿ
ಪುರವಣಿ ಸಂಪಾದಕರು
ವಿಶ್ವವಾಣಿ

ಯಾವುದೇ ಪತ್ರಿಕೆಗೆ ೫೦ನೇ ಸಂಚಿಕೆ ಎಂಬುದು ನಿಜಕ್ಕೂ ಸಂಭ್ರಮದ ವಿಚಾರ; ಜತೆಗೆ ಅದೊಂದು ಅಪರೂಪದ ಮೈಲುಗಲ್ಲು ಸಹ ಹೌದು. `ಅನಂತ ಪಥ' ಪತ್ರಿಕೆಯು ೫೦ನೇ ಸಂಚಿಕೆಯನ್ನು ಹೊರತರುತ್ತಿದೆ ಎಂದಾಗ, ಈ ಸಂತಸ ಮೂಡುತ್ತದೆ. ಇದೊಂದೇ ಅಲ್ಲ, ಇನ್ನೊಂದು ಪ್ರಮುಖ ವಿಚಾರವನ್ನೂ ಗಮನಿಸಬೇಕು: ಸದಾ ಪರೋಪಕಾರಕ್ಕೆ ಮೀಸಲಾದ ವಿಚಾರಗಳನ್ನು, ಬೇರೆಯವರಿಗೆ ಸಹಾಯವಾಗುವ ವಿಷಯಗಳನ್ನು ಪ್ರಕಟಿಸುತ್ತಾ ಬಂದಿರುವ ಈ ಪತ್ರಿಕೆಯು, ತನ್ನ ೫೦ನೇ ಸಂಚಿಕೆಯನ್ನು ಹೊರತರುತ್ತಿದೆ ಎಂದರೆ ಅದು ಇನ್ನಷ್ಟು ವಿಶೇಷ ಮತ್ತು ಹೆಮ್ಮೆಯ ವಿಷಯ.

ವಿಷಯ ವೈವಿಧ್ಯತೆ ಹೊಂದಿರುವ ಅನಂತಪಥ ಪತ್ರಿಕೆಯ ಹಿಂದಿನ ೪೯ ಸಂಚಿಕೆಗಳನ್ನು ಅವಲೋಕಿಸಿದಾಗ, ಹಲವು ಲೇಖನಗಳು ಗಮನ ಸೆಳೆದವು. ಜತೆಗೆ ಪತ್ರಿಕೆ ಅನುಸರಿಸಿಕೊಂಡು ಬಂದಿರುವ ಥೀಮ್ ಅಥವಾ ತತ್ವವೂ ಸ್ಪಷ್ಟವಾಯಿತು. ಪರೋಪಕಾರದ ವಿವಿಧ ಆಯಾಮಗಳನ್ನು ಒಳಗೊಂಡ, ನಾನಾ ಪ್ರಮುಖ ವಿಷಯಗಳನ್ನು ಈ ಹಿಂದೆ ಪ್ರಸ್ತುತಪಡಿಸಲಾಗಿದೆ. ವಿಶೇಷವಾಗಿ, ಅನಂತಕುಮಾರ್ ಅವರ ಬದುಕಿನ ಪುಟಗಳ ಆಪ್ತ ನಿರೂಪಣೆ, ಅವರ ಆತ್ಮೀಯರ ನೆನಪುಗಳು, ಹಾಗೂ ರಾಜಕೀಯ ಜೀವನದಲ್ಲಿ ಅವರು ಆದರ್ಶ ರೂಪವಾಗಿ ಮಾಡಿದ ಕೆಲಸಗಳ ನಿರೂಪಣೆಗಳು ಗಮನಸೆಳೆದಿವೆ. ಅನಂತಕುಮಾರ್ ಅವರ ಪರೋಪಕಾರ ಕೈಂಕರ್ಯವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಂದುವರಿಸಿಕೊಂಡು ಬಂದಿರುವುದು ಸಹ ವಿಶೇಷ ಮತ್ತು ಅನುಕರಣೀಯ. ಈ ಕುರಿತು ಹಲವಾರು ಬರಹಗಳು ಅನಂತಪಥದಲ್ಲಿ ಪ್ರಕಟಗೊಂಡಿವೆ.

`ಅನಂತ ಪಥ'ದ ಇದುವರೆಗಿನ ಸಂಚಿಕೆಗಳಲ್ಲಿ ಹಲವು ಪ್ರಮುಖ ಲೇಖನಗಳು ಪ್ರಕಟಗೊಂಡಿವೆ; ಅವೆಲ್ಲವನ್ನೂ ಉದಹರಿಸುವುದು ಸ್ಥಳ ಮಿತಿಯಿಂದ ಸಾಧ್ಯವಿಲ್ಲ. ಆದರೂ, ಕೆಲವೊಂದು ವಿಶೇಷ ಲೇಖನಗಳನ್ನು ಪ್ರಸ್ತಾಪಿಸಿ, ಅವು ಇಂದಿನ ಸಮಾಜದಲ್ಲಿ ಏಕೆ ಪ್ರಸ್ತುತ ಎಂಬುದನ್ನು ಗುರುತಿಸಲು ಬಯಸುತ್ತೇನೆ.

ಅನಂತಕುಮಾರ್ ಅವರು ಪರಿಸರವನ್ನು ರಕ್ಷಿಸುವಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು; ಅಲ್ಲದೆ, ಅದನ್ನು ತಾವೇ ಅನುಷ್ಠಾನದಲ್ಲೂ ಇಡುತ್ತಿದ್ದರು. ಇದನ್ನು ಬಿಂಬಿಸುವ ಪರಿಸರ ಸ್ನೇಹಿ ಪ್ಲೇಟ್ ಬ್ಯಾಂಕ್ ಯೋಜನೆ' ಕುರಿತು ಡಿಸೆಂಬರ್ ೨೦೨೧ರ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನವು ಗಮನಸೆಳೆದಿದೆ. ನಮ್ಮ ಸುತ್ತಲೂ ಹಲವರಿಗೆ ಪರಿಸರದ ಕುರಿತು ಅಪಾರ ಆಸಕ್ತಿ ಇದೆ; ಪರಿಸರ ರಕ್ಷಿಸಬೇಕು ಎಂದು ಕರೆಯನ್ನೂ ಕೊಡುತ್ತಾರೆ; ಆದರೆ, ಅವರಲ್ಲಿ ಹಲವರು ತಮ್ಮ ಕಾಳಜಿಯನ್ನು ಹೇಳಿಕೆಗೆ ಮಾತ್ರ ಸೀಮಿತಗೊಳಿಸುತ್ತಾರೆ. ಇದಕ್ಕೆ ನಾನಾ ಕಾರಣಗಳಿರಬಹುದು, ಅದು ಬೇರೆ ವಿಚಾರ. ಆದರೆ, ಅನಂತ ಕುಮಾರ್ ಅವರ ಪರಿಸರ ಕಾಳಜಿಯ ಒಂದು ಉದಾಹರಣೆ `ಪ್ಲೇಟ್ ಬ್ಯಾಂಕ್'ಯೋಜನೆಯಲ್ಲಿ ಕಾಣಬಹುದು. ಹೇಳಿಕೆಗಳ ಜತೆಯಲ್ಲೇ, ತಾವೇ ಸ್ವತಃ ಕಾರ್ಯರೂಪಕ್ಕೆ ತಂದ ಪರಿಸರಸ್ನೇಹಿ ಯೋಜನೆ ಇದು. ಪ್ಲಾಸ್ಟಿಕ್ ಲೋಟಗಳಲ್ಲಿ ಬಿಸಿಯಾದ ಹಾಲು, ಚಹ, ಕಾಫೀ ಕುಡಿದಾಗ ಎಷ್ಟೊಂದು ಪ್ಲಾಸ್ಟಿಕ್ ಕಣಗಳು (ಮೈಕ್ರೋ ಪ್ಲಾಸ್ಟಿಕ್) ನಮ್ಮ ದೇಹವನ್ನು ಪ್ರವೇಶಿಸುತ್ತವೆ ಮತ್ತು ಅದರಿಂದ ಆರೋಗ್ಯಕ್ಕೆ ಹಾನಿ ಎಂದು ಮನಗಂಡ ಅನಂತಕುಮಾರ್ ಅವರು, ಹತ್ತು ಸಾವಿರ ಸೆಟ್ ಸ್ಟೀಲ್ ಪ್ಲೇಟ್, ಲೋಟ ಮತ್ತು ಚಮಚಗಳನ್ನು ಖರೀದಿಸಿದ್ದು ಬಹಳ ಪ್ರಮುಖ ಘಟನೆ ಎಂದೇ ನನಗೆ ಅನಿಸುತ್ತದೆ, ಸಭೆ, ಸಮಾರಂಭಗಳಲ್ಲಿ ಉಂಟಾಗುವ ಈ ಪ್ಲಾಸ್ಟಿಕ್ ಅವಾಂತರಗಳನ್ನು ಸೂಕ್ಷ್ಮವಾಗಿ ಗಮನಿಸಿದ ಅನಂತಕುಮಾರ್ ದಂಪತಿ, ೨೦೧೬ರಲ್ಲಿ ತಮ್ಮ ಮಗಳು ಐಶ್ವರ್ಯಾ ಅವರ ಮದುವೆಯಲ್ಲಿ ಹತ್ತು ಸಾವಿರ ಸೆಟ್ ಸ್ಟೀಲ್ ಪ್ಲೇಟ್, ಲೋಟ ಮತ್ತು ಚಮಚಗಳನ್ನು ಖರೀದಿಸಿ ಬಳಸಿದರು. ನಂತರ ಅವೆಲ್ಲವನ್ನೂ ಇತರರು ಬಳಸಲು ಉಚಿತವಾಗಿ ನೀಡಿದರು. ಹೀಗೆ ಬಳಸಿ-ಹಿಂದಿರುಗಿಸಿ ಎಂಬ ಆಲೋಚನೆಯಿಂದ ಹುಟ್ಟಿದ ಪ್ಲೇಟ್ ಬ್ಯಾಂಕ್' ಯೋಜನೆಯು, ಪರಿಸರಕ್ಕೆ ಮಹತ್ತರ ಸೇವೆ ಸಲ್ಲಿಸುತ್ತಿದೆ. ಇದು ಬೆಂಗಳೂರು, ಹುಬ್ಬಳ್ಳಿ, ಕಲಬುರ್ಗಿ ಮತ್ತು ಗದಗದಲ್ಲೂ ಲಭ್ಯವಿರುವುದು ಗಮನಾರ್ಹ.

ಅನಂತಪಥ ಪತ್ರಿಕೆಯ ಮಾರ್ಚ್ ೨೦೨೧ ಸಂಚಿಕೆಯಲ್ಲಿ ಪ್ರಕಟಗೊಂಡ ಜನೌಷಧಿ ಯೋಜನೆಯ ಕುರಿತ ಲೇಖನವೂ ಬಹುಮುಖ್ಯ. ಔಷಧ ಮಾಫಿಯಾದ ಶೋಷಣೆಯಿಂದ ಜನಸಾಮಾನ್ಯರನ್ನು ರಕ್ಷಿಸಲು ಈ ಯೋಜನೆ ಪ್ರಾರಂಭಿಸಲಾಯಿತು. ಜೆನರಿಕ್ ಔಷಧಗಳ ಪರಿಕಲ್ಪನೆ, ಅವುಗಳ ಗುಣಮಟ್ಟ, ಕಡಿಮೆ ಬೆಲೆಗೆ ದೊರಕುವ ವಿವರಣೆಗಳು ಈ ಲೇಖನದಲ್ಲಿ ವಿವರಿಸಲ್ಪಟ್ಟಿವೆ. ಅನಂತಕುಮಾರ್ ಅವರು ಈ ಯೋಜನೆಗೆ ಬೃಹತ್ ಕೊಡುಗೆ ನೀಡಿದ್ದರು. ಜನಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ಔಷಧ ದೊರಕಲು ಈ ಯೋಜನೆಯು ಸಾಕಷ್ಟು ಸಹಾಯ ಮಾಡುತ್ತಿದೆ. ಇತ್ತೀಚೆಗೆ ಈ ಯೋಜನೆಗೆ ಕೆಲವು ನಿರ್ಬಂಧಗಳು ಎದುರಾಗಿರುವುದು ಕಳವಳಕಾರಿ.




ಅನಂತಪಥ ಪತ್ರಿಕೆಯ ಹಲವು ಸಂಚಿಕೆಗಳಲ್ಲಿ `ಅದಮ್ಯ ಚೇತನ' ಸಂಸ್ಥೆಯ ಕೆಲಸಗಳು ಮತ್ತು ಯೋಜನೆಗಳನ್ನು ತಿಳಿಸುವ ಬರಹಗಳು ಪ್ರಕಟಗೊಂಡಿದ್ದು, ಇವು ಜನಸಾಮಾನ್ಯರಲ್ಲಿ ಪರೋಪಕಾರದ ಹಂಬಲವನ್ನು ಬೆಳೆಸುವಲ್ಲಿ ಪ್ರಮುಖ ಎಂದೇ ನನ್ನ ಅನಿಸಿಕೆ. ಹಲವು ಕಡೆ ಉಚಿತ ಆಹಾರ ವಿತರಣೆಯ ಕೈಂಕರ್ಯ ಒಂದೆಡೆಯಾದರೆ, ಮಹಿಳೆಯರಿಗೆ ಸ್ವ ಉದ್ಯೋಗ ತರಬೇತಿ ಮೊದಲಾದ ಹಲವು ಪ್ರಮುಖ ಯೋಜನೆಗಳನ್ನು `ಅದಮ್ಯ ಚೇತನ' ಜಾರಿಯಲ್ಲಿಟ್ಟಿದೆ. `ಅದಮ್ಯ ಚೇತನ'ದ ಸಮಾಜಸೇವೆಯ ವಿವರಗಳನ್ನು ಇನ್ನಷ್ಟು ವ್ಯಾಪಕವಾಗಿ ಪ್ರಚಾರಕ್ಕೆ ತರಬೇಕಾದ ಅವಶ್ಯಕತೆಯಿದೆ. ಆ ಕುರಿತು `ಅನಂತಪಥ'ದ ಮುಂದಿನ ಸಂಚಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವ ಮೂಲಕ, ಅನಂತಕುಮಾರ್ ಅವರ ಆಶಯದಂತೆ ಕೆಲಸ ಮಾಡುತ್ತಿರುವ ಈ ಸಂಸ್ಥೆಯ ವಿವಿಧ ಜನಸ್ನೇಹಿ ಕೆಲಸಗಳನ್ನು ಜನಸಾಮಾನ್ಯರಿಗೆ ಪರಿಚಯಿಸಬಹುದು. ಜನಪರ ವಿಚಾರಗಳನ್ನು ಒಳಗೊಂಡ ಈ ಪತ್ರಿಕೆಯು ಮುಂದಿನ ದಿನಗಳಲ್ಲಿ ಜನಸಾಮಾನ್ಯರ ಒಲವು ಗಳಿಸಲಿ, ಜತೆಗೆ ಸಕ್ರಿಯ ಸಮಾಜಸೇವೆ ಮಾಡಲಿ ಎಂಬುದೇ ಎಲ್ಲರ ಆಶಯ.

ಪುಟ 3 ರಿಂದ

## ಏನೇ ಇರಲಿ, ಪೋಲಿಸ್ ಬರಲಿ!

ಪ್ರಿನ್ಸಿಪಾಲರು ಈಗ ಪೋಲೀಸರನ್ನು ಕರೆಸಲೇ ಬೇಕಾಯಿತು. ತುರ್ತುಪರಿಸ್ಥಿತಿಯ ದಿನಗಳಲ್ಲಿ ಹೀಗೆ ನಾಲ್ವರು ಸತ್ಯಾಗ್ರಹಿಗಳು ಭಾಷಣ ಮಾಡುತ್ತಿದ್ದರೆ, ಅವರ ಸತ್ಯಾಗ್ರಹಕ್ಕೆ ಬೆಂಬಲವಾಗಿ ನಿಂತ ಸಾವಿರ ವಿದ್ಯಾರ್ಥಿಗಳು ಹೀಗೆ ಘೋಷಣೆ ಕೂಗುತ್ತಿದ್ದರೆ, ಪ್ರಿನ್ಸಿಪಾಲರಾದರೂ ಏನು ಮಾಡಿಯಾರು?

ಅದೇ ಸಮಯಕ್ಕೆ ಇದೇ ದೃಶ್ಯಾವಳಿ ಇನ್ನೂ ಐದು ಶಿಕ್ಷಣಸಂಸ್ಥೆಗಳಲ್ಲಿ ಚಾಲನೆಯಲ್ಲಿತ್ತು. ಎಲ್ಲ ಪ್ರಿನ್ಸಿಪಾಲರಿಂದ ಒಂದೇ ವೇಳೆಗೆ ಪೋಲೀಸ್ ಸ್ಟೇಶನ್ನಿಗೆ ಕರೆಗಳು ಬರತೊಡಗಿದವು. ಇದು ಪೋಲೀಸರಿಗಂತೂ ತೀರಾ ಅನಿರೀಕ್ಷಿತವಾಗಿದ್ದ ಸನ್ನಿವೇಶ. ಅವರಿಗೆ ಎಲ್ಲೆಲ್ಲಿಗೆ ಹೋಗಬೇಕೆಂಬ ಗೊಂದಲ ಶುರುವಾಯಿತು. ಒಂದು ಕಡೆ ಸಿದ್ದೇಶ್ವರ ಕಾಲೇಜ್, ಇನ್ನೊಂದು ಕಾಮರ್ಸ್ ಕಾಲೇಜು, ಮತ್ತೆಲ್ಲೋ ಸೈನ್ಸ್ ಕಾಲೇಜು ಈ ಸುತ್ತಾಟದಲ್ಲಿ ಜಾಬೀನ್ ಕಾಲೇಜಿಗೆ ವ್ಯಾನ್ ಅಂತೂ ಬರಲಿಲ್ಲ. ಕೊನೆಗೂ ಇಬ್ಬರು ಪೋಲೀಸರು ಮಾತ್ರ ಗೇಟಿನ ಬಳಿ ಕಾಣಿಸಿಕೊಂಡರು. ಪ್ರಿನ್ಸಿಪಾಲರಿಗೂ ಸಾಕೆನಿಸಿತ್ತು. ಒಮ್ಮೆ ಪೋಲೀಸರು ಬಂದರೆ ಸಾಕಪ್ಪಾ ಎನ್ನಿಸಿತ್ತು. " ಸರಿ ಪೋಲೀಸರು ಬಂದರು, ನೀವು ಸತ್ಯಾಗ್ರಹ ಮಾಡುವವರು ಹೊರಡಿ ಏನಾದರೂ ಮಾಡಿಕೊಳ್ಳಿ" ಎಂದರೆ ಇವರು ಹೋಗಬೇಕಲ್ಲ! " ಆ ಪೋಲೀಸರು ಇಲ್ಲಿಗೇ ಬಂದು ಎಲ್ಲರೆದುರಿಗೆ ನಮ್ಮನ್ನು ಅರೆಸ್ಟ್ ಮಾಡಿ ಕರೆದುಕೊಂಡು ಹೋಗತಕ್ಕದ್ದು" ಎಂದು ಹೇಳತೊಡಗಿದರು. ಅಂತೂ ಇಂತೂ ಇವರನ್ನು ಪೋಲೀಸರು ಅರೆಸ್ಟ್ ಮಾಡುವ ಹೊತ್ತಿಗೆ ಎರಡೂವರೆ ಗಂಟೆಯಾಗಿತ್ತು. ಅಂದರೆ, ಸುಮಾರು ಒಂದೂವರೆ ಗಂಟೆಗಳ ಕಾಲ ಈ ನವೀನ ಸತ್ಯಾಗ್ರಹಿಗಳ ವೀರಾವೇಶದ ಪ್ರದರ್ಶನ ನಡೆದಿತ್ತು.

ಪೋಲೀಸ್ ವ್ಯಾನಿನಲ್ಲಿ ಇವರನ್ನು ಹತ್ತಿಸಿ, ಬೇರೆ ಬೇರೆ ಕಾಲೇಜುಗಳಲ್ಲಿದ್ದ ಸತ್ಯಾಗ್ರಹಿಗಳನ್ನು ಕರೆದುಕೊಂಡು ಬರಲು ಹೋದಾಗಲೂ ಈ ಹುಡುಗರು ಘೋಷಣೆಗಳನ್ನು ಕೂಗುತ್ತಲೇ ಇದ್ದರು. ಆವೊತ್ತು ಇಡಿಯ ವಿದ್ಯಾನಗರದಲ್ಲೇ ಈ ಸತ್ಯಾಗ್ರಹಿಗಳು ಅಪೂರ್ವ ಸಂಚಲನವನ್ನು ಸೃಷ್ಟಿಸಿದ್ದಂತೂ ನಿಜ.

# ಉಕ್ಕು ಉತ್ಪಾದನೆ ಮತ್ತು ಪ್ರಕೃತಿ ರಕ್ಷಣೆ

**(ಸಿಮೆಂಟ್ ಮತ್ತು ಉಕ್ಕು ಉದ್ಯಮಗಳ ತಜ್ಞರಾದ ಡಾ.ರಂಗನಾಥನ್ ಅವರು ಅನಂತಕುಮಾರ್ ಪ್ರತಿಷ್ಠಾನವು ಆಯೋಜಿಸಿದ್ದ 'ಮೈಸ್ಟೋರಿ'- ನೇತೃತ್ವದ ಕಥನಗಳ ಎಂಬ ಉಪನ್ಯಾಸ ಸರಣಿಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು, "ಸಿಮೆಂಟ್ ಮತ್ತು ಉಕ್ಕು ಉದ್ಯಮಗಳಲ್ಲಿ ಪರಿಸರ ಸ್ನೇಹಿ ಉಪಕ್ರಮಗಳು" ಎಂಬ ವಿಷಯದ ಕುರಿತು ಮಾಡಿದ ಭಾಷಣದ ಸಾರಾಂಶ)**

ಒಂದು ದೇಶದ ಪ್ರಗತಿಗೆ ಕೈಗಾರಿಕೀಕರಣ ಅನಿವಾರ್ಯ. ಜನರ ಜೀವನಮಟ್ಟ ಸುಧಾರಿಸಲು, ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಹಾಗೂ ಬಡತನ ನಿವಾರಣೆಗೆ ಕೈಗಾರಿಕೆಗಳು ಮಹತ್ತರ ಪಾತ್ರ ವಹಿಸುತ್ತವೆ. ಸೇತುವೆಗಳು, ಕಟ್ಟಡಗಳು, ವಾಹನಗಳು ಮತ್ತು ಯಂತ್ರೋಪಕರಣಗಳು ಸೇರಿದಂತೆ ನಮ್ಮ ದೈನಂದಿನ ಜೀವನದ ಬಹುತೇಕ ಅಂಶಗಳಲ್ಲಿ ಉಕ್ಕು ಮತ್ತು ಸಿಮೆಂಟ್ ಅವಶ್ಯಕವಾಗಿದೆ. ಆದರೆ ಕೈಗಾರಿಕೀಕರಣದದಿಂದ ಪರಿಸರದ ಮೇಲೆ ಬೀರುವ ಪರಿಣಾಮಗಳು ಗಂಭೀರವಾಗಿವೆ. ಭೂಮಿ, ಗಾಳಿ, ನೀರು ಮಾಲಿನ್ಯ ಹಾಗೂ ಶಬ್ದ ಮಾಲಿನ್ಯ, ಜಾಗತಿಕ ತಾಪಮಾನ ಏರಿಕೆ, ವಾತಾವರಣದ ಅಸಮತೋಲನ ಮತ್ತು ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಕೈಗಾರಿಕೀಕರಣದ ವೇಗಕ್ಕೆ ಪರಿಸರವನ್ನು ಬಲಿಕೊಡದೆ, ಕೈಗಾರಿಕೆಗಳ ಜೊತೆಜೊತೆಗೆ ಪರಿಸರ ರಕ್ಷಣೆ ಸಾಧ್ಯವೇ ಎಂಬುದೇ ಸವಾಲಿನ ವಿಷಯ.

### ಉಕ್ಕು ಕೈಗಾರಿಕೆ ಮತ್ತು ಅದರ ಪರಿಣಾಮಗಳು


ಭಾರತದ ಪ್ರಮುಖ ಕೈಗಾರಿಕೆಗಳಲ್ಲಿ ಉಕ್ಕು ಮತ್ತು ಸಿಮೆಂಟ್ ಕೈಗಾರಿಕೆಗಳಿವೆ. ಉಕ್ಕು ಉತ್ಪಾದನೆಯು ದೇಶದ ಮೂಲಭೂತ ತಾಂತ್ರಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಅವಶ್ಯಕವಾಗಿದೆ. ಕಟ್ಟಡಗಳು, ಸೇತುವೆಗಳು, ಅಣೆಕಟ್ಟುಗಳು ಹಾಗೂ ಸಾರಿಗೆ ವ್ಯವಸ್ಥೆಗಳಲ್ಲಿ ಉಕ್ಕು ಪ್ರಮುಖ ಅಂಶವಾಗಿದೆ. ಆದರೆ, ಪರಿಸರದಲ್ಲಿ ಮಾಲಿನ್ಯ ಹೆಚ್ಚಿಸುವಲ್ಲಿಯೂ ಉಕ್ಕು ಕಾರ್ಖಾನೆಗಳು ಹೆಚ್ಚಿನ ಪಾಲನ್ನು ಹೊಂದಿವೆ.

ಉಕ್ಕು ತಯಾರಿಕೆಯ ಪ್ರಕ್ರಿಯೆಯು ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ಪ್ರಾರಂಭವಾಗುತ್ತದೆ. ಕಬ್ಬಿಣದ ಅದಿರಿನ ಜೊತೆ ಕಲ್ಲಿದ್ದಲು, ಸುಣ್ಣದಕಲ್ಲು ಮತ್ತು ಸ್ಫಟಿಕ ಬಳಸಿ ಉಕ್ಕು ತಯಾರಿಸುತ್ತಾರೆ. ದೊಡ್ಡ ಪ್ರಮಾಣದ ಯಂತ್ರೋಪಕರಣಗಳ ಬಳಕೆಯಿಂದಾಗಿ, ಗಣಿಗಾರಿಕೆ ಪ್ರದೇಶಗಳಲ್ಲಿ ವಾಸಿಸುವ ಜನರ ಆರೋಗ್ಯ ಮತ್ತು ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮಗಳು ಉಂಟಾಗುತ್ತವೆ. ಈ ಗಣಿಗಾರಿಕೆಯು ಅರಣ್ಯ ನಾಶ, ಮಣ್ಣಿನ ಸವೆತ ಮತ್ತು ಜಲ ಮಾಲಿನ್ಯಕ್ಕೆ ಕಾರಣವಾಗುತ್ತದೆ. ಗಣಿಗಾರಿಕೆ ನಡೆಯುವ ಪ್ರದೇಶಗಳ ಪರಿಸರ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗುತ್ತದೆ.

ಉಕ್ಕು ಉತ್ಪಾದನಾ ಘಟಕಗಳಲ್ಲಿ ಕಲ್ಲಿದ್ದಲನ್ನು ವ್ಯಾಪಕವಾಗಿ ಬಳಸುವುದರಿಂದ ವಾಯು ಮಾಲಿನ್ಯ ತೀವ್ರವಾಗುತ್ತದೆ. ಹಸಿರುಮನೆ ಅನಿಲಗಳು ಮತ್ತು ಇತರ ವಿಷಕಾರಿ ಅನಿಲಗಳು ವಾತಾವರಣಕ್ಕೆ ಸೇರಿಕೊಂಡು ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುತ್ತವೆ. ಕುದುರೆಮುಖ ಗಣಿಯ ಅದಿರಿನ ಬಳಕೆ ಭಾರತದಲ್ಲಿ ಇಲ್ಲದಿದ್ದರೂ ವಿದೇಶಗಳಲ್ಲಿ ಆ ಅದಿರಿಗೆ ಬಹಳಷ್ಟು ಬೇಡಿಕೆ ಇದೆ. ಗಣಿಗಾರಿಕೆಯಿಂದ ಬಂದ ಅದಿರನ್ನು ಶುಚಿಗೊಳಿಸಿ ಅದರ ಸಬಲತೆಯನ್ನು ಹೆಚ್ಚಿಸಬೇಕಾಗುತ್ತದೆ. ಈ ಕಾರ್ಯದಲ್ಲಿ ತ್ಯಾಜ್ಯಗಳು ಸಂಗ್ರಹವಾಗುವುದರೊಂದಿಗೆ ಬಹಳಷ್ಟು ಪ್ರಮಾಣದ ನೀರು ಬೇಕಾಗುತ್ತದೆ. ಕಾರ್ಖಾನೆಗಳಿಂದ ಹೊರಬರುವ ಧೂಳು ಮತ್ತು ತ್ಯಾಜ್ಯಗಳು ಮಣ್ಣು ಮತ್ತು ನೀರಿನ ಗುಣಮಟ್ಟವನ್ನು ಹಾಳುಮಾಡುತ್ತವೆ. ಇದು ಕೃಷಿ ಭೂಮಿ ಮತ್ತು ನೀರಿನ ಮೂಲಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಉಕ್ಕು ಉತ್ಪಾದನೆಯಲ್ಲಿ ಬಳಸುವ ಹೆಚ್ಚಿನ ಪ್ರಮಾಣದ ನೀರು ಅಂತರ್ಜಲದ ಮಟ್ಟವನ್ನು ಕುಗ್ಗಿಸುತ್ತದೆ.



ಕಲ್ಲಿದ್ದಲನ್ನು ಉಪಯೋಗಿಸಲು ಅದನ್ನು ಕೋಕ್ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಕಲ್ಲಿದ್ದಲನ್ನು ಗಾಳಿಯ ಸಹಾಯವಿಲ್ಲದೆ ಉರಿಸಿ ತಯಾರಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಕಾರ್ಬನ್ ಮೋನಾಕ್ಸೈಡ್, ಗಂಧಕ ಮುಂತಾದ ವಿಷಕಾರಿ ಅನಿಲಗಳ ಜೊತೆಗೆ ಹಾರು ಬೂದಿ ತಯಾರಾಗುತ್ತದೆ. ಸಾಮಾನ್ಯವಾಗಿ ಊದು ಕುಲುಮೆಯಿಂದ ದ್ರವರೂಪದ ಕಬ್ಬಿಣ ತಯಾರಾದರೆ, ನೇರ ಕುಲುಮೆಯ ಮೂಲಕ ಘನರೂಪದ ಕಬ್ಬಿಣ ತಯಾರಿಸಲಾಗುತ್ತದೆ. ಈ ಕಬ್ಬಿಣವನ್ನು ಶುದ್ಧೀಕರಿಸುವಾಗ ಇಂಗಾಲ, ಸಿಲಿಕಾನ್ ಮುಂತಾದ ವಸ್ತುಗಳು ಬೇರ್ಪಡಿಸಲಾಗುತ್ತವೆ. ಈ ಪ್ರಕ್ರಿಯೆಯಲ್ಲಿ ಗಸಿ (ಕಿಟ್ಟ) ಮತ್ತು ಅನಿಲಗಳು ಹೊರಹೊಮ್ಮುತ್ತವೆ. ನಂತರ, ಕೂಲಿಂಗ್ ವಿಧಾನ ಅನುಸರಿಸಿ ಫಲಕ, ಬಿಲ್ಲೆ ರೂಪದ ಉಕ್ಕನ್ನು ಪಡೆಯಲಾಗುತ್ತದೆ.




ಭಾರತವು ಪ್ರಪಂಚದಲ್ಲಿಯೇ ಉಕ್ಕು ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ, ಚೀನಾ ಮೊದಲ ಸ್ಥಾನದಲ್ಲಿದೆ. ನಮ್ಮ ದೇಶ ಮತ್ತು ಚೀನಾದ ಉಕ್ಕು ಉತ್ಪಾದನೆಯ ಅಂತರ ಸುಮಾರು ಒಂದು ಸಾವಿರ ಮಿಲಿಯನ್ ಟನ್‌ಗಳಷ್ಟಿದೆ. ಭಾರತದ ಜನಸಂಖ್ಯೆಗೆ ಅನುಗುಣವಾಗಿ ನಮಗೆ ಅಗತ್ಯವಿರುವಷ್ಟೇ ಉಕ್ಕನ್ನು ನಾವು ಉತ್ಪಾದಿಸುತ್ತಿದ್ದು, ಮುಂದಿನ ದಿನಗಳಲ್ಲಿ ಸುಧಾರಣೆ ಕಾಣಬಹುದಾಗಿದೆ.

### ಪರಿಸರದ ಮೇಲಿನ ಪರಿಣಾಮಗಳು ಮತ್ತು ಮಾರ್ಗೋಪಾಯಗಳು

ಉಕ್ಕು ತಯಾರಿಸುವಾಗ ವಾತಾವರಣಕ್ಕೆ ಬಿಡುಗಡೆಗೊಳ್ಳುವ ಕಣಗಳು ಮತ್ತು ವಿಷಕಾರಿ ಅನಿಲಗಳು ಅಸ್ತಮಾ, ಶ್ವಾಸಕೋಶದ ಕಾಯಿಲೆಗಳು, ಬ್ರಾಂಕೈಟಿಸ್ ಮುಂತಾದ ದೀರ್ಘಕಾಲದ ರೋಗಗಳಿಗೆ ಕಾರಣವಾಗುತ್ತವೆ. ಹಸಿರು ಮನೆ ಅನಿಲಗಳು ಜಾಗತಿಕ ತಾಪಮಾನ ಏರಿಕೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ನೀರು ಮತ್ತು ನೀರಿನ ಮೂಲಗಳ ಆಮ್ಲೀಕರಣದಲ್ಲೂ ಇದು ಪ್ರಮುಖ ಪಾತ್ರ ವಹಿಸುತ್ತದೆ. ವರ್ಷಕ್ಕೆ ಸುಮಾರು 600 ರಿಂದ 1000 ಟನ್‌ಗಳಷ್ಟು ಸೂಕ್ಷ್ಮ ಧೂಳಿನ ಕಣಗಳು ತ್ಯಾಜ್ಯವಾಗಿ ಉತ್ಪತ್ತಿಯಾಗುತ್ತವೆ. ಈ ಧೂಳಿನ ಕಣಗಳು ಕೃಷಿ ಭೂಮಿಯ ಮೇಲೂ, ನೀರಿನ ಮೂಲಗಳ ಮೇಲೂ ಹರಡಿ ಅವುಗಳು ಉಪಯೋಗಕ್ಕೆ ಬಾರದಂತೆ ಮಾಡುತ್ತವೆ. ಈ ಧೂಳಿನ ಕಣಗಳನ್ನು ಉಸಿರಾಟದ ಮೂಲಕ ಒಳಗೆಳೆಯುವುದರಿಂದ ಹಲವಾರು ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ.

ಪರಿಸರ ಸಮಿತಿಯು ಕಾರ್ಖಾನೆಯ ಒಟ್ಟು ಪ್ರದೇಶದ ಶೇಕಡಾ 33% ರಷ್ಟನ್ನು ಅರಣ್ಯ ಪ್ರದೇಶವಾಗಿ ಕಾಪಾಡುವುದು ಮತ್ತು ಮರಗಳನ್ನು ಬೆಳೆಸುವುದು ಕಡ್ಡಾಯಗೊಳಿಸಿದೆ. ಇದರಿಂದ ಧೂಳು ಮತ್ತು ಕಾರ್ಖಾನೆಯ ಶಬ್ದ ಮಾಲಿನ್ಯದಿಂದ ಕೆಲವು ಮಟ್ಟಿಗೆ ಪರಿಹಾರ ಒದಗುತ್ತದೆ.

ಹಲವು ಸಂದರ್ಭಗಳಲ್ಲಿ ಕೈಗಾರಿಕೆಗಳ ಅಗತ್ಯಕ್ಕಿಂತ ಹೆಚ್ಚಿನ ನೀರಿನ ಬೇಡಿಕೆಯನ್ನು ಪರಿಸರ ಸಮಿತಿಗಳು ತಿರಸ್ಕರಿಸಿವೆ. ಅಂತರ್ಜಲವನ್ನು ಕೈಗಾರಿಕೆಗಳು ಬಳಸುವಂತಿಲ್ಲ ಎಂಬ ಆದೇಶವನ್ನು ಹೊರಡಿಸಲಾಗಿದೆ. ಅದೃಷ್ಟವಶಾತ್, ಉಕ್ಕು ಕೈಗಾರಿಕೆಯ ತ್ಯಾಜ್ಯವನ್ನು ಸಿಮೆಂಟ್ ಕೈಗಾರಿಕೆಗಳು ಬಳಸಿಕೊಳ್ಳುತ್ತವೆ. ಹಾರುಬೂದಿಯಿಂದ ಇಟ್ಟಿಗೆಗಳನ್ನು ತಯಾರಿಸಲಾಗುತ್ತಿದೆ, ಹಾಗೂ ರಸ್ತೆ ನಿರ್ಮಾಣ ಕಾರ್ಯದಲ್ಲೂ ಈ ತ್ಯಾಜ್ಯಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

ಭಾರತ ಸರ್ಕಾರವು 2070ರ ವೇಳೆಗೆ ಇಂಗಾಲ ತಟಸ್ಥ(carbon neutral) ದೇಶವಾಗಬೇಕು ಎಂಬ ಗುರಿಯನ್ನು ಹೊಂದಿದೆ. ಈ ಗುರಿಯನ್ನು ಸಾಧಿಸಲು, ಉಕ್ಕು ಕೈಗಾರಿಕೆಗಳು ಪರಿಸರ ಸ್ನೇಹಿ ಉತ್ಪಾದನಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. ಕೈಗಾರಿಕೆಗಳು ಮತ್ತು ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಿದರೆ, ಉಕ್ಕು ಉತ್ಪಾದನೆಯನ್ನು ಪರಿಸರ ಸ್ನೇಹಿಯನ್ನಾಗಿ ಮಾಡಲು ಸಾಧ್ಯವಿದೆ. ಪ್ರತಿ ಟನ್ ಉಕ್ಕು ಉತ್ಪಾದನೆಯಾಗುವಾಗ ಎರಡು ಟನ್ ಇಂಗಾಲದ ಡೈಯಾಕ್ಸೈಡ್ ಬಿಡುಗಡೆಗೊಳ್ಳುತ್ತದೆ. ಪರಿಸರ ಸಮಿತಿಗಳು ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದು, ತಟಸ್ಥ ಇಂಗಾಲ ನೀತಿಗೆ ಪೂರಕವಾಗುವಂತೆ ಯೋಜನೆಗಳನ್ನು ರೂಪಿಸಿ ಅನುಸರಿಸಲು ಸೂಚಿಸಲಾಗಿದೆ. ಪಳೆಯುಳಿಕೆ ಇಂಧನ ಬಳಕೆಯನ್ನು ಕಡಿಮೆ ಮಾಡಿ, ಸೌರಶಕ್ತಿ ಮುಂತಾದ ಪರ್ಯಾಯ ಮಾರ್ಗಗಳಿಗೂ ಒತ್ತು ನೀಡಲಾಗಿದೆ. ಕೈಗಾರಿಕೀಕರಣ ಜೊತೆಗೆ ಪರಿಸರ ರಕ್ಷಣೆ ನಮ್ಮ ಜವಾಬ್ದಾರಿ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಯಾಗಿ ವರ್ತಿಸುವುದು ಅಗತ್ಯ.

# ಅಸ್ಮಿತೆ- ಕ್ಷಾತ್ರತೇಜ

**(ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ವೇದವ್ಯಾಸಾಚಾರ್ ಶ್ರೀಶಾನಂದರವರು ಅನಂತ ಸೇವಾ ಉತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು “ಅಸ್ಮಿತೆ ಮತ್ತು ಕ್ಷಾತ್ರತೇಜ”ದ ವಿಷಯ ಕುರಿತು ಮಾಡಿದ ಭಾಷಣದ ಸಾರಾಂಶ)**

**(ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ)**

ಅಜ್ಜಂದಿರು, ತಂದೆಯಂದಿರು ನಮಗೆ ಹೇಳಿಕೊಟ್ಟ ರಂತಿದೇವನಂತಹ ಮೌಲ್ಯಯುತ ಕಥೆಗಳನ್ನು ನಾವು ಮರೆತಿದ್ದೇವೆ. ನಾವು ಅದನ್ನು ನಮ್ಮ ಮಕ್ಕಳಿಗೂ ಹೇಳಿಕೊಡಲಿಲ್ಲ. ನಮ್ಮ ಪಕ್ಕದ ಮನೆಯಲ್ಲಿ ನೀರು ವ್ಯರ್ಥವಾಗುತ್ತಿದ್ದರೆ ಅದನ್ನು ನಿಲ್ಲಿಸುವ ಬದಲು, “ಪಕ್ಕದ ಮನೆಯವರಲ್ಲವೇ, ಅವರೇ ನೋಡಿಕೊಳ್ಳಲಿ” ಎಂದು ನಿರ್ಲಕ್ಷಿಸುತ್ತೇವೆ.

ಇಂತಹ ನಿರ್ಲಕ್ಷ್ಯವನ್ನು ತೊರೆದು ನಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಪ್ರತಿಯೊಬ್ಬ ಭಾರತೀಯನೂ ತೆಗೆದುಕೊಳ್ಳಬೇಕು. ನಮ್ಮ ಸಂಸ್ಕೃತಿ ಮತ್ತು ಇತಿಹಾಸವನ್ನು ನಾವೇ ಗೌರವಿಸದಿದ್ದರೆ, ಅದರಿಂದ ನಷ್ಟವಾಗುವುದು ನಮ್ಮ ದೇಶಕ್ಕೆ ಮಾತ್ರ. ಒಂದು ಮೂಲೆಯಲ್ಲಿ ಬೆಂಕಿ ಬಿದ್ದಿದೆ ಎಂದು ಸುಮ್ಮನೆ ಕುಳಿತರೆ, ಅದು ನಾವಿರುವಲ್ಲಿಗೂ ಹರಡುತ್ತದೆ. ಪ್ರವಾಹವು ಎಲ್ಲರನ್ನೂ ಕೊಚ್ಚಿಕೊಂಡು ಹೋಗುತ್ತದೆ. ಇದು ನಿಸರ್ಗದ ನಿಯಮ.

ಭಾರತದ ಸಂಸ್ಕೃತಿ ಅತ್ಯಂತ ಪ್ರಾಚೀನವಾದುದು. ಅನೇಕ ದಾಳಿಗಳನ್ನು ಎದುರಿಸಿಯೂ ನಾವು ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದೇವೆ. ಮಹಾಭಾರತದಲ್ಲಿ ಅಸುರರು ದೇವಲೋಕವನ್ನು ಆಕ್ರಮಿಸಿಕೊಂಡ ಕಥೆಯಿದೆ. ಆಗ ದೇವತೆಗಳು ವಜ್ರಾಯುಧವನ್ನು ತಯಾರಿಸಲು ದಧೀಚಿ ಮಹರ್ಷಿಯ ಬೆನ್ನೆಲುಬನ್ನು ಕೇಳುತ್ತಾರೆ. ದಧೀಚಿ ಮಹರ್ಷಿಯು ಲೋಕಹಿತಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿ, ತಮ್ಮ ಬೆನ್ನೆಲುಬನ್ನು ದೇವತೆಗಳಿಗೆ ನೀಡುತ್ತಾರೆ. ಇಂತಹ ನಿಸ್ವಾರ್ಥ ಮತ್ತು ತ್ಯಾಗದ ಡಿಎನ್‌ಎ ನಮ್ಮಲ್ಲಿನ್ನೂ ಉಳಿದಿದೆ.

ನಾವು ಸಪ್ತರ್ಷಿಗಳ ವಂಶಸ್ಥರು. ನಮ್ಮಲ್ಲಿ ಜ್ಞಾನದ ಭಂಡಾರವಿದೆ. ಸ್ವಾಮಿ ವಿವೇಕಾನಂದರು “ಉತ್ತಿಷ್ಠ ಜಾಗೃತ” ಎಂದು ಕರೆ ನೀಡಿದ್ದು ನಮ್ಮ ಡಿಎನ್‌ಎಗೆ. ನಮ್ಮಲ್ಲಿರುವ ಅಪಾರ ಶಕ್ತಿಯನ್ನು ನಾವು ಕಳೆದುಕೊಳ್ಳಬಾರದು. ಆರ್ಯಭಟನು ಶೂನ್ಯವನ್ನು ಕಂಡುಹಿಡಿದನು. ಖಗೋಳಶಾಸ್ತ್ರಕ್ಕೆ ಅವನ ಕೊಡುಗೆ ಅಪಾರ. ಟೆಲಿಸ್ಕೋಪ್ ಇಲ್ಲದ ಕಾಲದಲ್ಲಿ ಅರುಂಧತಿ ನಕ್ಷತ್ರದ ಬಗ್ಗೆ ನಮ್ಮ ಋಷಿಮುನಿಗಳು ಜ್ಞಾನವನ್ನು ಹೊಂದಿದ್ದರು. ಅರುಂಧತಿ ಕೇವಲ ಒಂದು ನಕ್ಷತ್ರವಲ್ಲ, ಅದು ಎರಡು ನಕ್ಷತ್ರಗಳ ಸಮೂಹ. ಪತಿ-ಪತ್ನಿಯರ ನಡುವಿನ ಬಾಂಧವ್ಯವನ್ನು ಅರುಂಧತಿ ನಕ್ಷತ್ರದ ಮೂಲಕ ವಿವರಿಸಲಾಗುತ್ತದೆ. ಇಂತಹ ಉದಾತ್ತ ಸಂಸ್ಕೃತಿಯನ್ನು, ಜ್ಞಾನವನ್ನು ಹೊಂದಿರುವ ದೇಶ ನಮ್ಮದು. ಇಂದು ಫೇಸ್‌ಬುಕ್, ವಾಟ್ಸಾಪ್, ಇನ್‌ಸ್ಟಾಗ್ರಾಮ್‌ನಲ್ಲಿ ಸ್ನೇಹ ಬೆಳೆಸಿ, ಮರುದಿನವೇ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುವ ಕಾಲದಲ್ಲಿ, ಅರುಂಧತಿ ನಕ್ಷತ್ರದ ಮಹತ್ವವನ್ನು ನಾವು ಅರಿಯಬೇಕಾಗಿದೆ.

ಅಮೇರಿಕನ್ ಚಿಂತಕರೊಬ್ಬರು ಹೇಳುತ್ತಾರೆ, “ಒಂದು ದೇಶದ ಉದ್ಧಾರವಾಗಬೇಕೆಂದರೆ, ಆ ದೇಶದ ಇತಿಹಾಸವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.” ಆದರೆ, ನಮಗೆ ನಮ್ಮ ಇತಿಹಾಸದ ಬಗ್ಗೆ ಸರಿಯಾಗಿ ತಿಳಿದಿಲ್ಲ. ನಮ್ಮ ಇತಿಹಾಸವನ್ನು ತಿರುಚಲಾಗಿದೆ. ಸರಿಯಾದ ಇತಿಹಾಸವನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ನಮ್ಮನ್ನು ಗುಲಾಮರನ್ನಾಗಿ ಮಾಡಿದರು. ಭಾರತವು ಎಂದಿಗೂ ಇತರ ದೇಶಗಳ ಮೇಲೆ ದಾಳಿ ಮಾಡಿಲ್ಲ. ನಾವು ಶಾಂತಿಗೆ ಸದಾ ಸಿದ್ಧ, ಆದರೆ ನಮ್ಮ ಅಸ್ಮಿತೆಗೆ ಧಕ್ಕೆಯಾದರೆ, ನಾವು ಯುದ್ಧಕ್ಕೂ ಸಿದ್ಧ.

ನಮ್ಮಲ್ಲಿ ಕ್ಷಾತ್ರ ತೇಜಸ್ಸಿದೆ. ದ್ರೋಣಾಚಾರ್ಯರು, ಕೌರವರು ಮತ್ತು ಪಾಂಡವರಿಗೆ ಒಂದೇ ರೀತಿಯ ವಿದ್ಯೆಯನ್ನು ಕಲಿಸಿದರು. ಆದರೆ, ಅವರಲ್ಲಿನ ಕ್ಷಾತ್ರ ತೇಜಸ್ಸಿನ ಬಳಕೆಯಲ್ಲಿ ವ್ಯತ್ಯಾಸವಿತ್ತು. ಕ್ಷಾತ್ರ ತೇಜಸ್ಸು ಯಾವಾಗಲೂ ಉತ್ತಮ ಕಾರ್ಯಗಳಿಗೆ ಬಳಕೆಯಾಗಬೇಕು. ಪರಮಾಣು ಶಕ್ತಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಉತ್ತರ ಕೊರಿಯಾದಂತೆ ಅಣ್ವಸ್ತ್ರಗಳನ್ನು ಬೆದರಿಸಲು ಬಳಸಬಾರದು.

ಬ್ರಿಟಿಷರು ನಮ್ಮ ಸಂಸ್ಕೃತ ಭಾಷೆಯನ್ನು ನಾಶ ಮಾಡಲು ಪ್ರಯತ್ನಿಸಿದರು. ಸಂಸ್ಕೃತವನ್ನು ನಾಶ ಮಾಡಿದರೆ, ಸಂಸ್ಕೃತಿ ತಾನಾಗಿಯೇ ನಾಶವಾಗುತ್ತದೆ ಎಂದು ಅವರು ಭಾವಿಸಿದ್ದರು. ಲಾರ್ಡ್ ಮೆಕಾಲೆ ಸಂಸ್ಕೃತವನ್ನು ನಾಶ ಮಾಡಲು ಪ್ರಯತ್ನಿಸಿದ. ನಮ್ಮ ಶ್ರೀನಿವಾಸ್ ಶಾಸ್ತ್ರೀ, ರಾವ್ ಬಹದ್ದೂರ್ ವೆಂಕಟೇಶಾಚಾರ್‌ರಂತಹ ಮಹಾನ್ ಸಂಸ್ಕೃತ ಪಂಡಿತರಿಗೆ ಬ್ರಿಟಿಷ್ ಪದವಿಗಳ ಆಮಿಷ ತೋರಿಸಿ ಸಂಸ್ಕೃತವನ್ನು ಕಲಿಸದಂತೆ ಮಾಡುತ್ತಾನೆ. ಮೆಕಾಲೆಯ ಕುಟಿಲ ನೀತಿಗಳ ನೇರ ಪರಿಣಾಮವೇ ನಾವು ನೀವೆಲ್ಲರೂ. ಸಂಸ್ಕೃತದಲ್ಲಿ ಜ್ಞಾನದ ಭಂಡಾರವೇ ಅಡಗಿದೆ. ಬ್ರಹ್ಮಸೂತ್ರ ಅಮರಕೋಶದಂತಹ ಅಮೂಲ್ಯ ಗ್ರಂಥಗಳು ನಮ್ಮಲ್ಲಿವೆ.



ಇಂದು ನಾವು ಅಮರಕೋಶವನ್ನು ಮರೆತಿದ್ದೇವೆ. ಆದರೆ ವಿದೇಶೀಯರು ನಮ್ಮ ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದಾರೆ. ರಾಮಾಯಣ, ಮಹಾಭಾರತ, ಭಗವದ್ಗೀತೆ, ಬೈಬಲ್, ಕುರಾನ್ ಇವುಗಳನ್ನು ಜನರು ಗೌರವಿಸಬೇಕು. ಆದರೆ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರಗೀತೆ, ರಾಷ್ಟ್ರಧ್ವಜ, ಸಂವಿಧಾನ, ಮುಂತಾದ ರಾಷ್ಟ್ರಲಾಂಛನಗಳನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಿದೆ.

ಇಂದು ನಮ್ಮ ದೇಶದಲ್ಲಿ ಸಾಂಸ್ಕೃತಿಕ ಯುದ್ಧ ನಡೆಯುತ್ತಿದೆ. ಮಕ್ಕಳ ಮನಸ್ಸಿನಲ್ಲಿ ವಿಷಬೀಜಗಳನ್ನು ಬಿತ್ತಲಾಗುತ್ತಿದೆ. ಯುವಕರು ಮಾದಕದ್ರವ್ಯಗಳ ಜಾಲದಲ್ಲಿ ಸಿಲುಕುತ್ತಿದ್ದಾರೆ. ನಮ್ಮ ಸಂಸ್ಕೃತಿಯ ಮೇಲೆ ವಿದೇಶಿ ಸಂಸ್ಕೃತಿಯ ದಾಳಿಯಾಗುತ್ತಿದೆ. ನಮ್ಮ ಮಕ್ಕಳನ್ನು ಮತ್ತೆ ನಮ್ಮ ಸಂಸ್ಕೃತಿಗೆ ಸೆಳೆಯಬೇಕಾಗಿದೆ. ನಮ್ಮ ಯುವಶಕ್ತಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ. ನಮ್ಮ ದೇಶದ ಯುವಜನತೆಯನ್ನು ಮಾದಕದ್ರವ್ಯಗಳ ಜಾಲದಿಂದ ರಕ್ಷಿಸಬೇಕು.

“ಇಳೆ ನಿನ್ನ ದಾನ, ಮಳೆ ನಿನ್ನ ದಾನ, ಬೀಸೋ ಸುಳಿಗಾಳಿಯೂ ನಿನ್ನ ದಾನವಯ್ಯ” ಎಂದು ಜೇಡರ ದಾಸಿಮಯ್ಯ ಹೇಳಿದ್ದಾರೆ. ಇಂತಹ ಉತ್ತಮ ಸಂಸ್ಕೃತಿಯನ್ನು ನಮ್ಮ ಪೂರ್ವಜರು ನಮಗೆ ನೀಡಿದ್ದಾರೆ. ಅದನ್ನು ನಾವು ಉಳಿಸಿಕೊಳ್ಳಬೇಕು.

ನಾವು ನೊಂದವರಿಗೆ ನಮ್ಮ ದೇಶದಲ್ಲಿ ಆಶ್ರಯ ನೀಡಿದ್ದೇವೆ. ಒಮ್ಮೆ ಒಂಟೆಯೊಂದು ತನ್ನ ತಲೆಯನ್ನು ಗುಡಿಸಲೊಳಗೆ ಇಟ್ಟು ಮಲಗಿಕೊಳ್ಳಲು ಅಜ್ಜಿಯ ಅನುಮತಿ ಕೇಳುತ್ತದೆ. ಮೂಕಪ್ರಾಣಿಯ ಮೇಲೆ ದಯೆತೋರಿ ಅಜ್ಜಿ ಸ್ವಲ್ಪ ಜಾಗ ಮಾಡಿಕೊಡುತ್ತಾಳೆ. ನಂತರ ಹೊರಗೆ ಬಿಸಿಲು ಜಾಸ್ತಿಯಾಗಿದೆ ಎಂದು ಒಂಟೆ ತನ್ನ ಮುಂಗಾಲು ಒಳಗೆ ಇಡುತ್ತದೆ, ಸ್ವಲ್ಪ ಸಮಯದ ನಂತರ ಇಡೀ ದೇಹವನ್ನೇ ಒಳಗೆ ತಂದು ಅಜ್ಜಿಯನ್ನು ಹೊರಗೆ ಹಾಕುತ್ತದೆ. ಇಂತಹ ಒಂಟೆಗಳಿಗೆ ನಮ್ಮ ದೇಶವನ್ನು ಬಳಸಿಕೊಳ್ಳಲು ನಾವು ಬಿಡಬಾರದು. ನಮ್ಮಲ್ಲಿರುವ ಕ್ಷಾತ್ರ ತೇಜಸ್ಸನ್ನು ಜಾಗೃತಗೊಳಿಸಬೇಕು. ವಿವೇಕಾನಂದರು “ಉತ್ತಿಷ್ಠ ಜಾಗೃತ” ಎಂದು ಕರೆ ನೀಡಿದ್ದು ಇದಕ್ಕಾಗಿಯೇ.

ಒಂದು ಬಾರಿ ಸೂರ್ಯನು ವಿಷ್ಣುವಿನ ಬಳಿ ರಜೆ ಕೇಳಿದ. ಆದರೆ, ಸೂರ್ಯನ ಕೆಲಸವನ್ನು ವಹಿಸಿಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಒಂದು ಸಣ್ಣ ಹಣತೆ ಮಾತ್ರ ಮುಂದೆ ಬಂದು ತನ್ನ ಸುತ್ತ ಒಂದು ಮಾರು ದೂರದ ವರೆಗೆ ಬೆಳಕು ಬೀರುವ ಕೆಲಸವನ್ನು ವಹಿಸಿಕೊಳ್ಳಲು ಸಿದ್ಧವಾಯಿತು. ಆ ಪುಟ್ಟ ಹಣತೆಯಂತೆಯೇ ನಾವು 140 ಕೋಟಿ ಭಾರತೀಯರು ಬೆಳಗಬೇಕಾಗಿದೆ. ನಮ್ಮ ಪರಂಪರೆ ಮತ್ತು ಸಂಸ್ಕೃತಿಗಳನ್ನು ಉಳಿಸಲು ಕತ್ತಿ, ಗುರಾಣಿ ಹಿಡಿದು ಹೋರಾಡುವ ಅಗತ್ಯವಿಲ್ಲ. ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಿಕೊಂಡರೆ, ನಮ್ಮ ದೇಶದ ಮಹಾನ್ ಸಾಧನೆಗಳನ್ನು ಸ್ಮರಿಸಿಕೊಂಡರೆ ಸಾಕು. “ಆ ನೋ ಭದ್ರಾಃ ಕೃತವೋ ಯಂತು ವಿಶ್ವತಃ” - ವಿಶ್ವದೆಲ್ಲೆಡೆಯಿಂದ ಜ್ಞಾನದ ಬೆಳಕು ಹರಿದು ಬರಲಿ ಎಂಬ ವೇದಸಂಸ್ಕೃತಿ ನಮ್ಮದು. ನಮ್ಮ ಅಜ್ಞಾನವನ್ನು ದೂರ ಮಾಡಿಕೊಂಡು ನಮ್ಮಲ್ಲಿರುವ ಕ್ಷಾತ್ರ ತೇಜಸ್ಸಿನ ಪ್ರಭೆಯನ್ನು ಬೆಳಸಿಕೊಳ್ಳಬೇಕು. ನಮ್ಮ ದೇಶದ ಉದಾತ್ತ ಧ್ಯೇಯಗಳನ್ನು ಇಡೀ ಪ್ರಪಂಚಕ್ಕೆ ಹರಡಬೇಕು. ◆

ಪುಟ 1 ರಿಂದ

## ಅನಂತ ಯಶಸ್ಸಿನ ಪುಟಗಳನ್ನು ತೆರೆದಿಡುವ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರ

ಹುಬ್ಬಳ್ಳಿ ಈದ್ಗಾ ಮೈದಾನ ಹೋರಾಟದ ಚಿತ್ರಗಳು, ಅನಂತಕುಮಾರ್ ಅವರ ಮಗಳು ಐಶ್ವರ್ಯಾ ದಿವ್ಯೇಶ್ ಅವರ ಮದುವೆಯ ಸಂದರ್ಭದಲ್ಲಿ ನರೇಂದ್ರ ಮೋದಿ, ಅಮಿತ್ ಶಾ ಆದಿಯಾಗಿ ಲಲ್ಲು ಪ್ರಸಾದ್, ನಿತೀಶಕುಮಾರ್, ಸೇರಿದಂತೆ ಭಾರತದ ಎಲ್ಲಾ ಪ್ರಮುಖ ನಾಯಕರು ಭಾಗವಹಿಸಿದ ಚಿತ್ರಗಳು, ಪ್ರತಿದಿನ ತಪ್ಪದೇ ಭಗವದ್ಗೀತೆ ಶ್ಲೋಕಗಳನ್ನು ಪಠಿಸಿ ತಮ್ಮ ದಿನಚರಿಯನ್ನು ಪ್ರಾರಂಭಿಸುತ್ತಿದ್ದ ಅನಂತಕುಮಾರ್ ಅವರ ದೆಹಲಿ ಮನೆಯ ಪೂಜಾ ಕೋಣೆ, ಅನಂತಕುಮಾರ್ ಅವರು ಭಗವದ್ಗೀತೆ ಓದುತ್ತಿರುವ ಪ್ರತಿಮೆ, ದೆಹಲಿ ಮನೆಯ ಊಟದ ಮೇಜು, ಸರಳ ಜೀವನಶೈಲಿ ಮತ್ತು ಕಾರ್ಯವೈಖರಿಯನ್ನು ಬಿಂಬಿಸುವ ಅನಂತಕುಮಾರ್ ಅವರ ಸ್ಮರಣಿಕೆಗಳು, ಅವರು ದೆಹಲಿಯಲ್ಲಿ ಬಳಸುತ್ತಿದ್ದ ಪೀಠೋಪಕರಣಗಳನ್ನು ಅದೇ ಮಾದರಿಯಲ್ಲಿ ಜೋಡಿಸಿ ಪ್ರದರ್ಶಿಸಲಾಗಿದೆ.

ಅನಂತಕುಮಾರ್ ಅವರ ಧ್ವನಿಯಲ್ಲಿನ ಪ್ರೇರಣಾದಾಯಕ ಮಾತುಗಳ ವಿಡಿಯೋ ತುಣುಕುಗಳು ಕೇಳುಗರನ್ನು ರೋಮಾಂಚನಗೊಳಿಸುತ್ತವೆ. ಅವರ ಬಾಲ್ಯದಿಂದ ಹಿಡಿದು ಎಬಿವಿಪಿ ಕಾರ್ಯಕರ್ತರಾಗಿ ಅವರು ಗಳಿಸಿದ ಅನುಭವ, ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷದ ಬೆಳವಣಿಗೆಗೆ ಅವರು ನೀಡಿದ ಕೊಡುಗೆ, ಆರು ಬಾರಿ ಸಂಸದರಾಗಿ, ಕೇಂದ್ರದಲ್ಲಿ ವಿವಿಧ ಖಾತೆಗಳ ಸಚಿವರಾಗಿ ಅವರು ಮಾಡಿದ ಕಾರ್ಯಗಳು, ಅವರ ನಾಯಕತ್ವದ ಶೈಲಿ, ಎಲ್ಲವನ್ನೂ ಪರಿಚಯಿಸಲಾಗಿದೆ. ಈ ಚಿತ್ರಗಳನ್ನು ಸವಿವರ ಅರ್ಥಮಾಡಿಕೊಳ್ಳಲು ಧ್ವನಿರೂಪದ ವ್ಯಾಖ್ಯಾನವುಳ್ಳ ಮೊಬೈಲ್ ಆಪ್ ಸೌಕರ್ಯವನ್ನೂ ವ್ಯವಸ್ಥೆ ಮಾಡಲಾಗಿದೆ.

ಈ ಕೇಂದ್ರದಲ್ಲಿ ಇಡಲಾದ ಪ್ರತಿ ಪೀಠೋಪಕರಣ, ವಸ್ತುಗಳು, ಸ್ಮರಣಿಕೆಗಳು ಇವೆಲ್ಲವೂ ಹತ್ತು ಹಲವು ಪ್ರೇರಣಾದಾಯಿ ಘಟನೆಗಳನ್ನು ನಿರೂಪಿಸುತ್ತವೆ. ಅನಂತಕುಮಾರರ ಹಾಸ್ಯ ಚಟಾಕಿಗಳು, ರಾಜಕೀಯ ಪಟ್ಟುಗಳು, ಏಳುಬೀಳುಗಳು, ಕನ್ನಡ ನಾಡುನುಡಿಗಳಿಗೆ ಅವರು ಕಲ್ಪಿಸಿದ ಮಹತ್ವ ಮೊದಲಾದವುಗಳನ್ನು ಈ ಕೇಂದ್ರದಲ್ಲಿ ತೋರಿಸುವ ಪ್ರಯತ್ನ ಆಗಿದೆ. ಪಕ್ಷ ಸಂಘಟನೆಯ ಜೊತೆಜೊತೆಗೇ ನಗರಾಭಿವೃದ್ಧಿ, ಆರೋಗ್ಯ, ಸಾರಿಗೆ, ಕೃಷಿ, ವಿಮಾನಯಾನ, ಸಂಸದೀಯ ವ್ಯವಹಾರಗಳು, ಗ್ರಾಮೀಣ ವಿಕಾಸ ಮೊದಲಾದ ಖಾತೆಗಳ ನಿರ್ವಹಣೆಯಲ್ಲಿ ಅನಂತಕುಮಾರ್ ವಹಿಸಿದ ಪಾತ್ರವೂ ಸೇರಿದಂತೆ ಅವರ ಜೀವನದ, ಸಾಧನೆಯ ಹಲವು ಆಯಾಮಗಳನ್ನು ಅನಂತ ಪ್ರೇರಣಾ ಕೇಂದ್ರದಲ್ಲಿ ತೆರೆದಿಡಲಾಗಿದೆ.

ಅನಂತಕುಮಾರ್ ಅವರ ಜೀವನ ಚರಿತ್ರೆ ಮತ್ತು ಸಾಧನೆಗಳನ್ನು ಬಿಂಬಿಸುವ ಅನಂತ ಪ್ರೇರಣಾ ಕೇಂದ್ರವು ಕೇವಲ ಒಂದು ವಸ್ತುಸಂಗ್ರಹಾಲಯವಾಗಿರದೇ, ಭವಿಷ್ಯದ ಪೀಳಿಗೆಗೆ ಪ್ರೇರಣೆಯ ಚಿಲುಮೆಯಾಗಿ ನಿಲ್ಲುತ್ತದೆ. ಅವರ ಸರಳತೆ, ಪ್ರಾಮಾಣಿಕತೆ ಮತ್ತು ರಾಷ್ಟ್ರಭಕ್ತಿಯನ್ನು ಸದಾ ಸ್ಮರಿಸುವಂತಾಗಲಿ. ಅನಂತಕುಮಾರ್ ಅವರ ಆದರ್ಶಗಳು ನಮ್ಮೆಲ್ಲರಿಗೂ ದಾರಿದೀಪವಾಗಲಿ.

## ಅನಂತ ಉತ್ಸವ, ಹುಬ್ಬಳ್ಳಿ

ದಿನಾಂಕ 27-04-2025 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದ ದ್ವಿತೀಯ ವಾರ್ಷಿಕೋತ್ಸವ ಸಮಾರಂಭವನ್ನು ಅನಂತ ಉತ್ಸವ ಹುಬ್ಬಳ್ಳಿ ಎಂಬ ಹೆಸರಿನಿಂದ ಆಚರಿಸಲಾಗುತ್ತಿದೆ.

ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದ 2ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಕ್ಕಳಿಗೆ ಮತ್ತು ಸಾರ್ವಜನಿಕರಿಗಾಗಿ ಈ ಕೆಳಗಿನ ಸ್ಪರ್ಧೆಗಳನ್ನು ಮತ್ತು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.

**ಸ್ಪರ್ಧೆಗಳು:** ದೇಶಭಕ್ತಿಗಾಯನಸ್ಪರ್ಧೆ, ಭಗವದ್ಗೀತಾಶ್ಲೋಕಪಠಣಸ್ಪರ್ಧೆ, ಯೋಗಾಸನ ಸ್ಪರ್ಧೆ, ಭಾಷಣ ಸ್ಪರ್ಧೆ, ಸಂಪೂರ್ಣ ವಂದೇಮಾತರಂ ಗಾಯನ, ಭಜನಾ ಸ್ಪರ್ಧೆ,
**ಕಾರ್ಯಾಗಾರಗಳು:** ಅಡುಗೆ ಮನೆ ಕೈತೋಟ ಹಾಗೂ ತಾರಸಿ ತೋಟ, ಮನೆಯ ಕಸದಿಂದ ಗೊಬ್ಬರ ತಯಾರಿಕೆ, ರಾಸಾಯನಿಕ ಮುಕ್ತ ಸಾಬೂನು ತಯಾರಿಕೆ.

ತಮ್ಮೆಲ್ಲರನ್ನೂ ಆತ್ಮೀಯವಾಗಿ ಸ್ವಾಗಸುತ್ತಿದ್ದೇವೆ. ಸ್ಪರ್ಧೆಗಳಲ್ಲಿ ಮತ್ತು ಕಾರ್ಯಾಗಾರಗಳಲ್ಲಿ ಭಾಗವಹಿಸಲು www.adamyachetana.org ವೆಬ್ಸೈಟ್ ವಿಳಾಸಕ್ಕೆ ಭೇಟಿ ನೀಡಿ.

## ದೆಹಲಿ ತಲುಪಿದ ಹುಬ್ಬಳ್ಳಿ ಸೀರಿ

ಕನ್ನಡ ಭಾಷೆಯಷ್ಟೇ ಹಳೆಯದಾದ, ಶತಮಾನಗಳಿಂದ ಕಾಲದ ಹೊಡೆತವನ್ನು ದಾಟಿ ಬಂದಿರುವ "ಜೀನ್ಸ್" ಬಟ್ಟೆಯಂತೆ ಗಟ್ಟಿಮುಟ್ಟಾಗಿರುವ, ಅತ್ಯಂತ ಬಲಿಷ್ಠವಾದ ನೇಯ್ಗೆಯನ್ನು ಹೊಂದಿರುವ ಈ ಗಟ್ಟಿ ಹುಬ್ಬಳ್ಳಿ ಸೀರೆಗಳು ನಮ್ಮ ಕನ್ನಡ ನಾಡಿನ ಹೆಮ್ಮೆಯಾಗಿವೆ. ಶತಮಾನಗಳಿಂದ ಶ್ರಮಜೀವಿ ಉತ್ತರ ಕರ್ನಾಟಕದ ಮಹಿಳೆಯರ ಪಾರಂಪರಿಕ ಉಡುಪಾಗಿದೆ. ಅಷ್ಟೇ ಅಲ್ಲದೇ ಈ ಸೀರೆಗಳು ಅತ್ಯಂತ ಹಿತಕರವಾಗಿದ್ದು ಸೊಬಗನ್ನು ಹೆಚ್ಚಿಸುತ್ತವೆ.



ಆಡುಮಾತಿನಲ್ಲಿ "ಗಾಡಿ - ದಡಿ" ಸೀರಿ ಎಂದು ಕರೆಯಲ್ಪಡುವ ಈ ಸೀರೆಗಳು 6.7 ಮೀಟರ್ ಉದ್ದವಾಗಿರುತ್ತವೆ. ದಡಿಯನ್ನೂ ಒಳಗೊಂಡಂತೆ 100% ಶುದ್ಧ ಹತ್ತಿಯ ಸೀರೆಗಳು (ಇಂದಿನ ಬಹಳಷ್ಟು ಕಾಟನ್ ಸೀರೆಗಳ ಅಂಚುಗಳು ಹೆಚ್ಚಾಗಿ ಪಾಲಿಯೆಸ್ಟರ್ ದಾರಗಳಿಂದ ಕೂಡಿರುತ್ತವೆ). ಸೀರೆಗಳಿಗೆ ಫಾಲ್ಸ್/ ಇಸ್ತ್ರಿ/ ಗಂಜಿ ಹಾಕುವ ಅಗತ್ಯವಿಲ್ಲ. ಈ ಸೀರೆಗಳು ಹೆಚ್ಚು ಉದ್ದವಾಗಿರುತ್ತವೆ. ಎರಡು ಬದಿಯಿಂದ ಉಡಬಹುದಾದ ಈ ಸೀರೆಗಳಿಗೆ ಎರಡು ಸೆರಗುಗಳು. ಒಂದು ಸರಳವಾದ ದಿನನಿತ್ಯ ಉಡುವಾಗಿನ ಸೆರಗು, ಇನ್ನೊಂದು ಹಬ್ಬ ಹುಣ್ಣಿಮೆ ಸಮಾರಂಭಗಳಿಗಾಗಿ ಜರಿಯ ಹೊಳಪಿನ ಟೋಪ ಸೆರಗು.

ಮೇಲಿನ ಚಿತ್ರದಲ್ಲಿ ದೆಹಲಿ ಮುಖ್ಯಮಂತ್ರಿ ಶ್ರೀಮತಿ ರೇಖಾ ಗುಪ್ತಾ ಅವರಿಗೆ ಸನ್ಮಾನಿಸುತ್ತಿರುವ ಮಾಜಿ ಕೇಂದ್ರ ಮಂತ್ರಿಗಳಾದ ಶ್ರೀಮತಿ ಸ್ಮೃತಿ ಇರಾನಿಯವರಿಗೆ ನಮ್ಮ ಕರ್ನಾಟಕದ ಸಂಸ್ಕೃತಿಯನ್ನು ಪರಿಚಯಿಸಿ ಹುಬ್ಬಳ್ಳಿಯ ಸೀರೆಯನ್ನು ಉಡುಗೊರೆಯಾಗಿ ನೀಡಿದ್ದು ನಮ್ಮ ಪತ್ರಿಕೆಯ ಪ್ರಕಾಶಕರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್.

## ನಿತ್ಯ ಅನ್ನದಾನ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ |
|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ, ಬೆಂಗಳೂರು, ಮ: 2.00 ರಿಂದ 3.00 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ: 12.30 ರಿಂದ 1.30 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ: 12.30 ರಿಂದ 1.30 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ: 12.30 ರಿಂದ 1.30 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ: 12:30ರಿಂದ 1:30ರವರೆಗೆ |
| 6 | ಶ್ರೀ ಈಶ್ವರ ದೇವಸ್ಥಾನ, ರೈಲ್ವೆ ಸ್ಟೇಷನ್ ರಸ್ತೆ, ಹುಬ್ಬಳ್ಳಿ ಮ: 12:30ರಿಂದ 1:30ರವರೆಗೆ |
| 7 | ಸ್ವಾಭಿಮಾನ ಸ್ವದೇಶಿ ಕೇಂದ್ರ ಸಂಕೀರ್ಣದ ಎದುರು, ಸೇಡಂ ರಸ್ತೆ, ಕಲಬುರ್ಗಿ ಮ: 12:30ರಿಂದ 1:30ರವರೆಗೆ |
| 8. | ಮಹಾತ್ಮ ಗಾಂಧೀಜಿ ಆಸ್ಪತ್ರೆಯ ಆವರಣ, ಜೋಧಪುರ, ರಾಜಸ್ಥಾನ. ಮ: 12:30 ರಿಂದ 2:00ವರೆಗೆ |

ನಿತ್ಯ ಅನ್ನದಾನ ಯೋಜನೆಯ ಸೇವೆಯನ್ನು ನಮ್ಮ ಎಲ್ಲಾ ಕೇಂದ್ರಗಳಲ್ಲಿಯೂ ಪ್ರತಿದಿನ 150 ರಿಂದ 250 ಜನರು ಉಪಯೋಗಿಸುತ್ತಿದ್ದಾರೆ. ಈ ಪವಿತ್ರ ಕಾರ್ಯದಲ್ಲಿ ಪ್ರಾಯೋಜಕರಾಗಿ ಮತ್ತು ಸಹಯೋಗಿಗಳಾಗಿ ಭಾಗವಹಿಸಲು ಅವಕಾಶವಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
**89046 23967**

ವ್ಯಕ್ತಿ ವಿಶೇಷ ಮಾಲಿಕೆ

# “ಧರ್ಮವೀರ” ಛತ್ರಪತಿ ಸಂಭಾಜಿ

- ಕೆ. ಜನಾರ್ದನ ತುಂಗ

೦೬/೦೬/೧೬೭೪ರಲ್ಲಿ ಹಿಂದವೀ ಸ್ವರಾಜ್ಯದ ಛತ್ರಪತಿಯಾಗಿ ಶಿವಾಜಿಯ ಪಟ್ಟಾಭಿಷೇಕವಾಯಿತು. ಏಪ್ರಿಲ್ ೩, ೧೬೮೦ರಲ್ಲಿ ರಾಯಗಡದ ಕೋಟೆಯಲ್ಲಿ ಶಿವಾಜಿ ನಿಧನವಾಗುವ ಹೊತ್ತಿಗೆ ಭಾರತದ ಬಹುಭಾಗ ಮರಾಠರ ಅಧೀನಕ್ಕೆ ಒಳಪಟ್ಟಿತ್ತು. ಶಿವಾಜಿಯ ನಿಧನದ ನಂತರ ಹಿಂದವೀ ಸ್ವರಾಜ್ಯವನ್ನು ಮುನ್ನಡೆಸುವವರು ಯಾರು ಎಂಬ ಪ್ರಶ್ನೆ ಎದ್ದಾಗ ಶಿವಾಜಿಯ ಎರಡನೇ ಹೆಂಡತಿ ಸೋಯರಾಬಾಯಿ ತನ್ನ ಹತ್ತು ವರ್ಷದ ಮಗನಿಗೆ ಪಟ್ಟ ಕಟ್ಟಿ ತಾನೇ ರಾಜ್ಯದ ಉಸ್ತುವಾರಿಯನ್ನು ವಹಿಸಿಕೊಂಡಳು. ಆದರೆ ಶಿವಾಜಿಯ ಮೊದಲ ಹೆಂಡತಿ ಸಾಯಿಬಾಯಿಯ ಮಗ ಸಂಭಾಜಿ, ರಾಜಾರಾಮನನ್ನು ೧೮/೦೬/೧೬೮೦ರಂದು ಪಟ್ಟದಿಂದ ಇಳಿಸಿ ೨೦/೦೭/೧೬೮೦ರಲ್ಲಿ ಹಿಂದವೀ ಸ್ವರಾಜ್ಯದ ಎರಡನೇ ಛತ್ರಪತಿಯಾಗಿ ಪಟ್ಟವನ್ನೇರಿದನು.



ಶಿವಾಜಿಯು ಅಷ್ಟೊಂದು ವಿಶಾಲ ಭೂಭಾಗವನ್ನು ಗೆದ್ದು ಹಿಂದೂ ಸಾಮ್ರಾಜ್ಯಕ್ಕೆ ಅಡಿಪಾಯ ಹಾಕಿದ್ದರೂ ತನಗಾದ ಗಾಯಗಳನ್ನು ಸವರುತ್ತಾ ಔರಂಗಜೇಬ ಸತತವಾಗಿ ದಕ್ಷಿಣದಲ್ಲಿಯೇ ಬೀಡುಬಿಟ್ಟಿದ್ದ. ಇಂತಹ ಸಂದರ್ಭದಲ್ಲಿ ಶಿವಾಜಿಯ ಸಂಕಲ್ಪವನ್ನು ಮುಂದುವರಿಸುವ ಕ್ಷಾತ್ರ ಮತ್ತು ಚಾಣಾಕ್ಷತೆ ಇದ್ದದ್ದು ಸಂಭಾಜಿಯಲ್ಲಿ ಮಾತ್ರ. ಜನಿಸಿದ ಎರಡು ವರ್ಷಕ್ಕೇ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆರಯ್ಕೆಯಲ್ಲಿ ಬೆಳೆಯುತ್ತಿದ್ದ ಸಂಭಾಜಿ ಶಿವಾಜಿಯ ಜೊತೆ ಬಾಲ್ಯದಿಂದಲೇ ಯುದ್ಧರಂಗದ ಅನುಭವವನ್ನು ಪಡೆದಿದ್ದ.

ಶಿವಾಜಿಯ ತಂತ್ರಗಾರಿಕೆ ಎಲ್ಲರಿಗೂ ತಿಳಿದದ್ದೇ. ಪ್ರಾರಂಭದಲ್ಲಿ ಸಣ್ಣಪ್ರಮಾಣದ ಸೈನ್ಯವನ್ನು ಹೊಂದಿದ್ದರಿಂದ ಗೆರಿಲ್ಲಾ ಯುದ್ಧತಂತ್ರ, ಕಗ್ಗೊಲೆ ಕಾಳಗ (ರಾತ್ರಿ ಯುದ್ಧ) ಮುಂತಾದ ಹಲವು ತಂತ್ರಗಳನ್ನು ಆತ ಬಳಸುತ್ತಿದ್ದ. ಶತ್ರುವಿನ ಕೈ ಮೇಲಾದಾಗ ಇನ್ನೊಂದು ದೊಡ್ಡ ಯುದ್ಧಕ್ಕಾಗಿ ಸಿದ್ಧತೆ ನಡೆಸಬಹುದು ಎಂಬ ಉದ್ದೇಶದಿಂದ ಸಂಧಾನಕ್ಕೆ ಮುಂದಾಗುತ್ತಿದ್ದ. ಇಂತಹದೇ ಒಂದು ಸಂದರ್ಭದಲ್ಲಿ ಮೊಘಲರೊಡನೆ ಪುರಂದರಗಡ ಒಪ್ಪಂದಕ್ಕೆ ೧೧/೦೬/೧೬೬೫ರಂದು ಸಹಿ ಹಾಕಬೇಕಾಯಿತು. ಸಂಧಾನದ ಷರತ್ತುಗಳ ಪಾಲನೆ ಸಂಪೂರ್ಣವಾಗುವವರೆಗೆ ಎಂಟು ವರ್ಷದ ಸಂಭಾಜಿ ರಾಜಾ ಜೈಸಿಂಗ್ ಜೊತೆ ಒತ್ತೆಯಾಗಿರಬೇಕಾಯಿತು. ಮುಂದಿನ ವರ್ಷವೇ ತಂದೆಯ ಜೊತೆಗೆ ಔರಂಗಜೇಬನ ದರ್ಬಾರಿಗೆ ತೆರಳಿದಾಗ ಅವರಿಬ್ಬರನ್ನೂ ಔರಂಗಜೇಬ ಬಂಧಿಸಿದ. ಅವನ ಬಂಧನದಿಂದ ನಾಟಕೀಯವಾಗಿ ತಂದೆ ಮಕ್ಕಳು ತಪ್ಪಿಸಿಕೊಂಡರು.

ಬಾಲ್ಯದಿಂದಲೇ ಯುದ್ಧರಂಗದಲ್ಲಿ ಸಮಯ ಕಳೆಯುತ್ತಿದ್ದ ಸಂಭಾಜಿಗೆ ಕೆಲವು ದುರ್ವ್ಯಸನಗಳು ಅಂಟಿಕೊಂಡವು. ಅವನ ನಡತೆಯನ್ನು ಸುಧಾರಿಸುವ ಸಲುವಾಗಿ ಶಿವಾಜಿಯು ಕೆಲವು ಕಾಲ ಅವನನ್ನು ಪನ್ಹಾಳಗಡ ಕೋಟೆಯಲ್ಲಿ ಗೃಹಬಂಧನದಲ್ಲಿರಿಸಿ ನಂತರ ಸಜ್ಜನಗಡದಲ್ಲಿ ಸಮರ್ಥ ರಾಮದಾಸರ ಜೊತೆ ವಾಸಿಸಲು ಕಳಿಸಿದ. ಅಲ್ಲಿಂದ ಪತ್ನಿಯ ಜೊತೆ ತಪ್ಪಿಸಿಕೊಂಡ ಆತ, ತನಗೆ ಮೊದಲೇ ಪರಿಚಯವಿದ್ದ ದಿಲೇರ್ ಖಾನನ ಜೊತೆ ಸೇರಿಕೊಂಡ. ಇದರಿಂದಾಗಿ ದಿಲೇರ್ ಖಾನ್ ಶಿವಾಜಿಯ ಜೊತೆ ೧೬೭೮ರಲ್ಲಿ ನಡೆಸಿದ ಭೂಪಾಲಗಡ ಯುದ್ಧದಲ್ಲಿ ಅವನ ಪರ ವಹಿಸಿದ್ದಲ್ಲದೆ ಶಿವಾಜಿಯ ಸೋಲಿಗೂ ಕಾರಣನಾದ.

ಈ ಯುದ್ಧದ ನಂತರ ಶಿವಾಜಿಯನ್ನು ಮರಳಿ ಸೇರಿಕೊಂಡ ಸಂಭಾಜಿಯನ್ನು ಪನ್ಹಾಳಾ ಕೋಟೆಯಲ್ಲಿ ಬಂಧನದಲ್ಲಿರಿಸಲಾಗಿತ್ತು. ೧೬೮೦ರಲ್ಲಿ ಶಿವಾಜಿಯ ಮರಣದ ನಂತರ ಬಂಧನದಿಂದ ತಪ್ಪಿಸಿಕೊಂಡ ಸಂಭಾಜಿ ಪನ್ಹಾಳಾ ಮತ್ತು ರಾಯಗಡ ಕೋಟೆಗಳನ್ನು ಗೆದ್ದು ೨೦/೦೭/೧೬೮೦ರಂದು ಮರಾಠಾ ಸಾಮ್ರಾಜ್ಯದ ಎರಡನೇ ಛತ್ರಪತಿಯಾಗಿ ರಾಜ್ಯಾಭಿಷಿಕ್ತನಾದ.

ಹಿಂದವೀ ಸ್ವರಾಜ್ಯದ ಕುರಿತು ಶಿವಾಜಿ ಪ್ರಾರಂಭಿಸಿದ ಕೆಲಸವನ್ನು ಸಂಭಾಜಿ ಮುಂದುವರಿಸುತ್ತ ಮುಘಲರ ವಿರುದ್ಧ ನಿರಂತರವಾಗಿ ಯುದ್ಧ ಮಾಡಬೇಕಾಯಿತು. ಔರಂಗಜೇಬ ಬುರ್ಹಾನ್‌ಪುರದ ಹಿಂದೂಗಳ ಮೇಲೆ ಜಿಜಿಯಾ ಎಂಬ ತಲೆಗಂದಾಯ ವಿಧಿಸಿದ್ದ. ಸಂಭಾಜಿ ಬುರ್ಹಾನ್‌ಪುರದ ಮೇಲೆ ೧೬೮೦ರ ಕೊನೆಯಲ್ಲಿ ದಾಳಿಮಾಡಿ ಅವನ ಖಜಾನೆಯನ್ನು ವಶಪಡಿಸಿಕೊಂಡದ್ದಲ್ಲದೆ ಔರಂಗಜೇಬನ ಮಗ ಅಕ್ಬರನಿಗೆ ಆಶ್ರಯ ನೀಡಿದ. ಇದರಿಂದಾಗಿ ಕುಪಿತನಾಗಿ ಸಂಭಾಜಿಯನ್ನು ಹಣಿಯಲು ದಕ್ಷಿಣದ ಔರಂಗಾಬಾದಿನಲ್ಲಿ ಬೀಡುಬಿಟ್ಟ ಔರಂಗಜೇಬ ಮತ್ತೆ ದೆಹಲಿಗೆ ವಾಪಸಾಗಲು ಸಾಧ್ಯವಾಗಲೇ ಇಲ್ಲ.

ಮುಘಲರ ಸೈನ್ಯ ಸಂಖ್ಯೆಯಲ್ಲಿ ದೊಡ್ಡದಾಗಿದ್ದರೂ ಸಂಭಾಜಿಯ ಗೆರಿಲ್ಲಾ ಯುದ್ಧತಂತ್ರದ ಎದುರು ಅದು ವಿಫಲವಾಗುತ್ತಿತ್ತು. ಮುಘಲರನ್ನು ಸಣ್ಣಪುಟ್ಟ ಕಾಳಗಗಳ ಮೂಲಕವೇ ಎದುರಿಸುತ್ತ ಅವರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದ ಸಂಭಾಜಿ ಅವರ ವಿರುದ್ಧ ಸಾಮ, ದಾನ, ಭೇದ, ದಂಡಗಳ ಚತುರೋಪಾಯಗಳನ್ನೂ ಬಳಸಿದ್ದ. ಮುಘಲ್ ಸೈನ್ಯ ೧೬೮೨ರಲ್ಲಿ ರಾಮ್‌ಸೇಜ್ ಕೋಟೆಯನ್ನು ಐದು ತಿಂಗಳ ಕಾಲ ಮುತ್ತಿಗೆ ಹಾಕಿದರೂ ವಶಪಡಿಸಿಕೊಳ್ಳಲು ವಿಫಲವಾಯಿತು. ತಮ್ಮ ಪ್ರಾಬಲ್ಯದ ಪ್ರದೇಶಕ್ಕೇ ಮುಘಲ್ ಸೈನ್ಯವನ್ನು ಸೆಳೆದು ನಾಶಪಡಿಸುವ ತಂತ್ರದಲ್ಲಿ ಸಂಭಾಜಿ ಯಶಸ್ವಿಯಾದ. ಸೋಲುವ ಸೂಚನೆ ಸಿಕ್ಕಿದ ಕೂಡಲೇ ತಾಂತ್ರಿಕವಾಗಿ ಹಿಂದೆ ಸರಿಯುತ್ತಿದ್ದ ಸಂಭಾಜಿಯ ಯುದ್ಧತಂತ್ರಗಳನ್ನು ಊಹಿಸುವುದೂ ಮುಘಲರಿಗೆ ಅಸಾಧ್ಯವಾಯಿತು. ೧೬೮೪ರಲ್ಲಿ ಸಂಭಾಜಿಯ ರಾಜಧಾನಿ, ರಾಯಗಡ ಕೋಟೆಯ ಮೇಲೆ ಯುದ್ಧ ಸಾರಿದ ಔರಂಗಜೇಬ ತೀರ ಅಪಮಾನಕರ ರೀತಿಯಲ್ಲಿ ಸೋತು ತನ್ನ ಗಮನವನ್ನು ಕುತುಬ್ ಶಾಹಿ ಮತ್ತು ಅದಿಲ್ ಶಾಹಿಗಳ ವಿರುದ್ಧ ತಿರುಗಿಸಿದ.

ಸಂಬಾಜಿ ೧೬೮೨ರಲ್ಲಿ ಅಬಿಸ್ಸೀನಿಯಾ ಮೂಲದ ಮುಸ್ಲಿಮರಾದ ಸಿದ್ದಿಗಳ ಜೊತೆ ಯುದ್ಧ ಸಾರಿ ಕೊಂಕಣ ಪ್ರದೇಶದಲ್ಲಿ ಅವರ ಪ್ರಾಬಲ್ಯಕ್ಕೆ ಕಡಿವಾಣ ಹಾಕಿದ. ಮುಘಲ್ ಸೈನ್ಯಕ್ಕೆ ಮದ್ದುಗುಂಡುಗಳನ್ನು ಸರಬರಾಜು ಮಾಡುತ್ತಿದ್ದ ಪೋರ್ಚುಗೀಸರು ಮರಾಠಾ ರಾಜ್ಯದ ಮೂಲಕವೇ ಸಾಗುತ್ತಿದ್ದುದನ್ನು ತಡೆದು ಗೋವಾದ ಮೇಲೆ ದಾಳಿ ಮಾಡಿದ. ಆಧುನಿಕ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳಿಲ್ಲದೆ ಮುಘಲರು ಮತ್ತು ಪೋರ್ಚುಗೀಸರನ್ನು ಎದುರಿಸುವುದು ದುಸ್ತರ ಎಂದರಿತ ಆತ ಬೊಂಬಾಯಿಯ ಇಂಗ್ಲಿಷರ ಜೊತೆ ಮದ್ದುಗುಂಡುಗಳ ಸರಬರಾಜಿನ ಒಪ್ಪಂದ ಮಾಡಿಕೊಂಡ. ನಂತರ ಪ್ರತಾಪಗಡ ಮುಂತಾದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡ.

೧೬೮೨ರಲ್ಲಿ ಸಂಭಾಜಿ ಮೈಸೂರನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದ. ಚಿಕ್ಕದೇವರಾಜ ಒಡೆಯರರ ಶೌರ್ಯದ ಮುಂದೆ ಸಂಭಾಜಿಯ ಹೋರಾಟ ವಿಫಲವಾಯಿತು. ಆದರೆ ಮರಾಠಾ ಸೈನ್ಯದ ಬಲವನ್ನು ಅರಿತ ಮೈಸೂರರಸರು ಮರಾಠರಿಗೆ ಪೊಗದಿಯನ್ನು ಕೊಡುವ ಒಪ್ಪಂದ ಮಾಡಿಕೊಂಡರು. ೧೬೮೭ರಲ್ಲಿ ಔರಂಗಜೇಬನ ಜೊತೆ ರಾಯಗಡದ ಸಮೀಪದ ವಾಯಿ ಎಂಬಲ್ಲಿ ನಡೆದ ಯುದ್ಧದಲ್ಲಿ ಮರಾಠರು ಜಯಗಳಿಸಿದರೂ ಯುದ್ಧದಲ್ಲಿ ಅವರ ಸೇನಾಪತಿ ಹಂಬೀರಾವ್ ಮೊಹಿತೆಯ ಸಾವು ಸೈನ್ಯದ ಧೃತಿಗೆಡಿಸಿತು. ಫೆಬ್ರವರಿ ೧೬೮೯ರಲ್ಲಿ ಸಂಗಮೇಶ್ವರದ ಹೋರಾಟದಲ್ಲಿ ಮುಖರ್ರಬ್ ಖಾನನ ನೇತೃತ್ವದ ಸೇನೆಯು ಸಂಭಾಜಿ, ಅವನ ಮಿತ್ರ ಕವಿಕಲಶ್ ಮತ್ತಿತರರನ್ನು ಕೈಸೆರೆಮಾಡಿತು.


ಸಂಭಾಜಿ ಮತ್ತು ಕವಿಕಲಶರನ್ನು ಬಹಾದುರ್‌ಗಡದ ಕೋಟೆಯಲ್ಲಿ ಇರಿಸಲಾಗಿತ್ತು. ದಕ್ಷಿಣಭಾರತದಲ್ಲಿ ಸಾಮಾಜ್ಯವನ್ನು ವಿಸ್ತರಿಸುವ ತನ್ನ ಮಹತ್ವಾಕಾಂಕ್ಷೆಗೆ ಮಗ್ಗುಲಮುಳ್ಳಿನಂತಿದ್ದ ಸಂಭಾಜಿಯನ್ನು ಇಸ್ಲಾಂ ಮತಕ್ಕೆ ಮತಾಂತರಗೊಳಿಸುವಂತೆ ಔರಂಗಜೇಬ ಮುಖರ್ರಬ್ ಖಾನನಿಗೆ ಆದೇಶ ನೀಡಿದ. ವಿಶಾಲ ಹಿಂದವೀ ಸಾಮ್ರಾಜ್ಯದ ಕನಸು ಕಂಡಿದ್ದ, ಜೀವನದುದ್ದಕ್ಕೂ ಹಿಂದೂಗಳ ಮತಾಂತರವನ್ನು ತಡೆಯಲು ಪ್ರಯತ್ನಿಸಿದ, ಮತಾಂತರಗೊಂಡ ಹಿಂದೂಗಳನ್ನು ಮಾತೃಧರ್ಮಕ್ಕೆ ಮರಳಿ ಕರೆತಂದ ಸಂಭಾಜಿ ತಾನೇ ಮತಾಂತರಗೊಳ್ಳಲು ಒಪ್ಪುವುದುಂಟೆ?

ಮತಾಂತರಕ್ಕೆ ಒಪ್ಪದ ಸಂಭಾಜಿ ಮತ್ತು ಕವಿಕಲಶರನ್ನು ವಿದೂಷಕರ ವೇಷ ತೊಡಿಸಿ ಒಂಟೆಗಳ ಮೇಲೆ ಕೂರಿಸಿ ಮುಘಲರ ಶಿಬಿರದ ಸುತ್ತಲೂ ಮೆರವಣಿಗೆ ಮಾಡಿಸಿ ಅವಮಾನ ಮಾಡಲಾಯಿತು. ಮತಾಂತರದ ಜೊತೆಗೆ ಮರಾಠರ ವಶದಲ್ಲಿದ್ದ ಎಲ್ಲಕೋಟೆಗಳನ್ನು ಮುಘಲರಿಗೆ ಬಿಟ್ಟುಕೊಡುವುದು ಮತ್ತು ಸಂಭಾಜಿಗೆ ಸಹಾಯ ಮಾಡಿದ ಅಧಿಕಾರಿಗಳ ಹೆಸರುಗಳನ್ನು ತಿಳಿಸುವುದು ಮುಂತಾದ ಷರತ್ತುಗಳನ್ನು ಸಂಭಾಜಿ ಹಿಂದೆಮುಂದೆ ನೋಡದೆ ತಿರಸ್ಕರಿಸಿದ. ತನ್ನ ಸಾಮ್ರಾಜ್ಯವಿಸ್ತಾರ ಮತ್ತು ಧರ್ಮಪ್ರಸಾರದ ಕಾರ್ಯಗಳಿಗೆ ದಶಕಗಳ ಕಾಲ ತಡೆಯೊಡ್ಡಿದ್ದ ಸಂಭಾಜಿಯನ್ನು ಚಿತ್ರಹಿಂಸೆ ನೀಡಿ ಕೊಲ್ಲುವಂತೆ ಔರಂಗಜೇಬ ಆದೇಶ ನೀಡಿದ.


(ಪುಟ 9 ರಲ್ಲಿ ಮುಂದುವರಿದಿದೆ)

# ಎಲ್ಲರಂತಲ್ಲ ನಮ್ಮ ಅನಂತಣ್ಣ

## ನಾನು ಕಂಡಂತೆ



## ಅನಂತಕುಮಾರ್





**ಯು. ರಮೇಶ್ ಕಂಪ್ಲಿ**
ನಿವೃತ್ತ ಚಿತ್ರಕಲಾ ಶಿಕ್ಷಕರು
ಬಳ್ಳಾರಿ

ನಗು ನಗು ನಗು! ಅದೆಷ್ಟು ಚಂದದ ನಗು! ಸದಾ ಹಸನ್ಮುಖಿ. ಮುಖದಲ್ಲಿ ಅದೆಷ್ಟೊಂದು ರಾಜಕಳೆ! ಸೀದಾಸಾದಾ ಮನುಷ್ಯ. ಪೈಜಾಮ ಜುಬ್ಬಾ, ಹೆಗಲಿಗೊಂದು ನೇತಾಡುವ ಚೀಲ. ಇದಿಷ್ಟು ಸಾಕು. ಎಲ್ಲರೂ ಅನಂತಕುಮಾರನೆಂದು ಗುರುತಿಸುತ್ತಾರೆ ಕಂಪ್ಲಿಯಲ್ಲಿ ನಾನು ಪಿಯುಸಿ ಓದುತ್ತಿರುವಾಗ ಅ.ಭಾ.ವಿ.ಪ. ಕಾರ್ಯದರ್ಶಿ ಆಗಿದ್ದೆ. ಆ ಸಂದರ್ಭದಲ್ಲಿ ನಮ್ಮ ಮನೆಯನ್ನು ಹುಡುಕಿಕೊಂಡು ಬಂದ ಅನಂತ್ ಜಿ ಆಗಲೇ ನನಗೆ ಪರಿಚಯವಾಗಿದ್ದು. ನಮಸ್ಕಾರ ಹೇಳಿ ಕುಳ್ಳಿರಿಸಿ ನಮ್ಮ ಮನೆಯಲ್ಲಿ ಆಗಲೇ ಮಾಡುತ್ತಿದ್ದ ಬಿಸಿ ಬಿಸಿ ರೊಟ್ಟಿ, ಹೆಸರು ಕಾಳಿನ ಪಲ್ಲೇ, ಉಪ್ಪಿನಕಾಯಿ ಉಪಹಾರಕ್ಕಾಗಿ ನೀಡಿದೆ.

ಸಂತೋಷದಿಂದಲೇ ತಿಂದು ಕಾಫಿ ಕುಡಿದು ಮೆಚ್ಚುಗೆ ಸೂಚಿಸಿದರು. "ಬಹಳ ದಿನಗಳಾಯ್ತು ರೊಟ್ಟಿ ತಿಂದಿರಲಿಲ್ಲ. ಖುಷಿಯಾಯಿತು" ಎಂದರು. ವಿದ್ಯಾರ್ಥಿ ಪರಿಷತ್ತಿನ ಸಂಘಟನೆಯ ಬಗ್ಗೆ ಕಾರ್ಯಚಟುವಟಿಕೆಗಳನ್ನು ಕುರಿತು ಚರ್ಚಿಸಿ ಸಭೆ ಕರೆಯಲು ಸೂಚಿಸಿದಂತೆ ಕಂಪ್ಲಿಯ ಎಲ್ಲಾ ಕಾರ್ಯಕರ್ತರನ್ನು ನಮ್ಮ ಮನೆಗೆ ಕರೆಸಿ ಸಭೆ ನಡೆಸಿದರು. ನಂತರ ಗಂಗಾವತಿಗೆ ತೆರಳಿದರು. ಅನಂತ್ ಅವರ ಸರಳತೆ ನಮಗೆ ತುಂಬಾ ಮೆಚ್ಚುಗೆಯಾಯಿತು. ಕಂಪ್ಲಿಯಲ್ಲಿ ಗಂಗಾವತಿಯ ಎಬಿವಿಪಿ ಕಾರ್ಯಕರ್ತರೊಂದಿಗೆ ಅಭ್ಯಾಸ ವರ್ಗ ಗುಂಡಾಚಾರ್ ಅವರ ಸಹಕಾರದೊಂದಿಗೆ ನಡೆಯಿತು.

ಅನಂತಜೀ ಈ ಅಭ್ಯಾಸ ವರ್ಗವನ್ನು ಯಶಸ್ವಿಗೊಳಿಸಿದರು. ಅವರ ಮಾತಿನ ವೈಖರಿ, ಸಂಘಟನಾ ಚತುರತೆ ಕಂಡು ನಮ್ಮೂರಿನ ಪ್ರಮುಖರು ಅನಂತಜೀಯವರ ಅಭಿಮಾನಿಗಳಾಗಿದ್ದು ವಿಶೇಷ. ಅಭ್ಯಾಸ ವರ್ಗದಲ್ಲಾಗಲಿ ವಿಶೇಷ ಸಂದರ್ಭಗಳಲ್ಲಾಗಲೀ ರಾಜಕೀಯದ ಬಗ್ಗೆ ಏನನ್ನು ಚರ್ಚಿಸುತ್ತಿರಲಿಲ್ಲ. ಶಿಕ್ಷಣದ ಬಗ್ಗೆ ನಾಯಕತ್ವದ ಬಗ್ಗೆ ದೇಶದ ಹಿತಚಿಂತಕರ ಬಗ್ಗೆ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಹೇಳುವ ಸಾಮರ್ಥ್ಯ ಹೊಂದಿದ್ದರು. ಎಲ್ಲಾ ವಿಷಯಗಳನ್ನು ಅರಿತ ಜ್ಞಾನ ಭಂಡಾರಿಯಾಗಿದ್ದರು. ಅವರಿಗೆ ಮಿರ್ಚಿ ಮಂಡಕ್ಕಿ ತುಂಬಾ ಇಷ್ಟ. ಕಂಪ್ಲಿಗೆ ಬಂದಾಗ ಅದನ್ನೇ ತರಿಸಲು ಹೇಳಿ ಖುಷಿಯಿಂದ ಸವಿಯುತ್ತಿದ್ದರು.

ಯಾವುದೇ ಜಾತಿ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ ಅನಂತ ಜಿ ಯಾರ ಮನಸ್ಸನ್ನು ನೋಯಿಸುತ್ತಿರಲಿಲ್ಲ. ವಿಭಾಗ, ರಾಜ್ಯ, ರಾಷ್ಟ್ರ, ಮಟ್ಟದ ಸಮ್ಮೇಳನಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಪುಸಲಾಯಿಸುತ್ತಿದ್ದರು. ಚಿಕ್ಕವರಲ್ಲಿ ಚಿಕ್ಕವರಾಗಿ ದೊಡ್ಡವರಲ್ಲಿ ದೊಡ್ಡವರಾಗಿ ಬೆರೆಯುತ್ತಿದ್ದರು. ಇಂತಹ ಅದಮ್ಯ ಚೇತನ ನಮ್ಮ ಜೊತೆ ಇಲ್ಲದಿದ್ದರೂ ಅವರ ಆದರ್ಶಗಳು ನಮಗೆ ಇಂದಿಗೂ ಮಾರ್ಗದರ್ಶಿಯಾಗಿವೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಆಗುವ ಯೋಗ ದೊರೆಯಲಿಲ್ಲ. ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿ ಮಾಡುವ ಸಾಮರ್ಥ್ಯ ಅವರಲ್ಲಿತ್ತು, ಆದರೆ ವಿಧಿ ಅಂತಹ ಅವಕಾಶವನ್ನು ಕಿತ್ತುಕೊಂಡಿತು. ಕೇಂದ್ರದಲ್ಲಿ ಯಾವುದೇ ಖಾತೆ ನೀಡಿದರೂ ಅದನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಯಾರ ಟೀಕೆಗೂ ಒಳಗಾಗದೇ ಆದರ್ಶ ಸಂಸದರಾಗಿ ಕಾರ್ಯನಿರ್ವಹಿಸಿದ್ದರು. ಇಂತಹ ವ್ಯಕ್ತಿ ನಮ್ಮ ಜೊತೆ ಇದ್ದರು ಎಂಬುದೇ ನಮಗೆ ಹೆಮ್ಮೆ. ಜೈ ಹೋ ಅನಂತ ಜೈ ಹೋ.

◆

ಪುಟ 8 ರಿಂದ

## "ಧರ್ಮವೀರ" ಛತ್ರಪತಿ ಸಂಭಾಜಿ

ಔರಂಗಜೇಬನ ಆದೇಶದಂತೆ ಸಂಭಾಜಿಯ ಉಗುರುಗಳನ್ನು ಕೀಳಲಾಯಿತು. ವ್ಯಾಘ್ರನಖದಿಂದ ಮೈತುಂಬ ಗಾಯ ಮಾಡಲಾಯಿತು. ಮೈತುಂಬ ರಕ್ತ ಬಸಿಯುತ್ತಿದ್ದರೂ ಬಗ್ಗದ ಸಂಭಾಜಿಯ ನಾಲಿಗೆಯನ್ನು ಕತ್ತರಿಸಲಾಯಿತು. ಕಾದ ಕಬ್ಬಿಣದ ಸಲಾಕೆಗಳನ್ನು ಊರಿ ಅವರಿಬ್ಬರ ಕಣ್ಣುಗಳನ್ನು ಕೀಳಲಾಯಿತು. ಕೊನೆಯಲ್ಲಿ ಬುರ್ಹಾನ್‌ಪುರದಲ್ಲಿ ಮುಸಲ್ಮಾನರನ್ನು ಹತ್ಯೆ ಮಾಡಿದ ಮತ್ತು ಪ್ರವಾದಿ ಮಹಮ್ಮದರಿಗೆ ಅಗೌರವ ತೋರಿಸಿದ ಆರೋಪದ ಮೇಲೆ ಮಾರ್ಚ್ ೧೧, ೧೬೮೯ರಂದು ಪುಣೆಯ ಸಮೀಪದ ತುಲಾಪುರದಲ್ಲಿ ಅವರಿಬ್ಬರ ಶಿರಚ್ಛೇದ ಮಾಡಲಾಯಿತು. ಅಂಗಾಂಗಗಳನ್ನು ಕತ್ತರಿಸಿ ಭೀಮಾನದಿಗೆ ಎಸೆಯಲಾಯಿತು.

ಸಂಭಾಜಿಯ ಜೀವನ ರಕ್ತರಂಜಿತವಾಗಿದ್ದರೂ ಆತ ತನ್ನ ರಾಜ್ಯದ ಆಡಳಿತವನ್ನು ನಿರ್ಲಕ್ಷಿಸಲಿಲ್ಲ. ಆತ ಶಿವಾಜಿಯ ಆಡಳಿತ ವ್ಯವಸ್ಥೆಯನ್ನು ಮುಂದುವರಿಸಿದ. ಛಂದೋಗಾಮಾತ್ಯ ಎಂದು ಹೆಸರಾದ ಕವಿಕಲಶ್ ಮತ್ತು ಎಂಟು ಮಂತ್ರಿಗಳ ಸಹಕಾರದಿಂದ ಆತ ಆಡಳಿತ ನಡೆಸಿದ. ೧೬೮೭ ರಿಂದ ೧೬೮೮ರ ವರೆಗೆ ಸಂಭವಿಸಿದ ಭೀಕರ ಕ್ಷಾಮದ ಸಂದರ್ಭದಲ್ಲಿ ರೈತರಿಗೆ ಅನುಕೂಲವಾಗುವಂತೆ ಅನೇಕ ಕೆರೆಗಳನ್ನು ಕಟ್ಟಿಸಿ ನೀರಾವರಿ ಸೌಲಭ್ಯವನ್ನು ಕಲ್ಪಿಸಿದ. ರೈತರಿಗೆ ಬೆಳೆ ವಿನ್ಯಾಸದ ಬಗ್ಗೆ ಸಲಹೆ, ಉಚಿತ ಬೀಜ, ಎತ್ತುಗಳು ಮತ್ತು ಕೃಷಿ ಸಲಕರಣೆಗಳ ವಿತರಣೆ, ಕರವಿನಾಯಿತಿ ಮುಂತಾದ ಪ್ರಗತಿಪರ ನಿರ್ಧಾರಗಳನ್ನು ತೆಗೆದುಕೊಂಡಿದ್ದ. ರೈತರಿಗೆ ಮುಘಲರಿಂದ ರಕ್ಷಣೆ ನೀಡಿ ಅವರು ಕೃಷಿಕಾರ್ಯದಲ್ಲಿ ನಿರಾತಂಕವಾಗಿ ತೊಡಗಿಕೊಳ್ಳುವಂತೆ ಸಹಾಯ ಮಾಡಿದ. ಬಂಜರು ಭೂಮಿಯನ್ನು ಕೃಷಿಯೋಗ್ಯವಾಗಿ ಪರಿವರ್ತಿಸಲು ಕ್ರಮ ತೆಗೆದುಕೊಂಡ.

ತನ್ನ ಸಾಮ್ರಾಜ್ಯದಲ್ಲಿ ಹಿಂದೂ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳಿಗೆ ಸಂಭಾಜಿ ಸಂಪೂರ್ಣ ಪ್ರೋತ್ಸಾಹ ನೀಡಿದ. ವಿದ್ಯಾಪ್ರಸಾರಕ್ಕಾಗಿ ಭೂಮಿ, ದವಸಧಾನ್ಯಗಳು ಮತ್ತು ಹಣವನ್ನು ಧಾರಾಳವಾಗಿ ನೀಡಿದ. ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದ. ಆತ ಮರಾಠಿ, ಸಂಸ್ಕೃತ, ಹಿಂದುಸ್ತಾನಿ ಮುಂತಾದ ಹಲವು ಭಾಷೆಗಳಲ್ಲಿ ಸುಲಲಿತವಾಗಿ ವ್ಯವಹರಿಸ ಬಲ್ಲವನಾಗಿದ್ದ. ಆತ ರಾಜ್ಯಾಡಳಿತದ ವಿವರಗಳನ್ನು ನೀಡುವ ಬುಧಭೂಷಣಮ್ ಎಂಬ ಮಹತ್ವತಿಯ ಜೊತೆಗೆ ನಾಯಿಕಾಭೇದ, ನಖ್‌ಶಿಕ್ಷಾ ಎಂಬ ಕೃತಿಗಳನ್ನೂ ರಚಿಸಿದ್ದಾನೆ.

ಧರ್ಮವೀರ ಎಂದು ಜನರಿಂದ ಕರೆಯಿಸಿಕೊಂಡ ಸಂಭಾಜಿ ಆ ಬಿರುದಿಗೆ ತಕ್ಕಂತೆ ಅನೇಕ ದೇವಾಲಯಗಳಿಗೆ ದತ್ತಿಯನ್ನು ನೀಡುವುದರ ಜೊತೆಗೆ ದೇವಾಲಯಗಳಿಗೆ ರಕ್ಷಣೆಯನ್ನೂ ಒದಗಿಸಿದ. ಪೋರ್ಚುಗೀಸರು ನಡೆಸುತ್ತಿದ್ದ ಮತಾಂತರ ಮತ್ತು ದೇವಾಲಯಗಳ ನಾಶವನ್ನು ತಪ್ಪಿಸಿದ. ಇತರ ಧರ್ಮಗಳಿಗೆ ಮತಾಂತರಗೊಂಡ ಹಿಂದೂಗಳನ್ನು ಮರಳಿ ಮಾತೃಧರ್ಮಕ್ಕೆ ಕರೆತಂದ.

ಸಂಭಾಜಿ ಕೇವಲ ವೀರಯೋಧ ಮಾತ್ರವಲ್ಲ. ಕುಶಲ ಆಡಳಿತಗಾರ, ಸಂಸ್ಕೃತಿ ಪೋಷಕ, ಪ್ರಜಾವತ್ಸಲ, ಧರ್ಮರಕ್ಷಕನೂ ಹೌದು. ಎಲ್ಲಕ್ಕಿಂತ ಹೆಚ್ಚಾಗಿ, ಮುಘಲರ ಆಳ್ವಿಕೆಯ ವಿರುದ್ಧ ಆತನ ಹೋರಾಟಗಳು ಮುಂದಿನ ಅನೇಕ ಪೀಳಿಗೆಗಳಿಗೂ ಪ್ರೇರಣೆ ನೀಡಿ ಮುಘಲ ಸಾಮ್ರಾಜ್ಯದ ಅವನತಿಗೆ ಕಾರಣವಾಯಿತು.

◆




ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಹಾಗೂ ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಜನ್ಮದಿನವನ್ನು ಮಾರ್ಚ್ 11ರಂದು ಅದಮ್ಯ ಚೇತನದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮೀಣ ಮಹಿಳಾ ನೇತೃತ್ವ ವಿಕಸನ ಶಿಬಿರ, ಹಸಿರು ಭಾನುವಾರ, ಸಸ್ಯಾಗ್ರಹ, ಪ್ಲೇಟ್ ಬ್ಯಾಂಕ್, ಬಡ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಜೈವಿಕ ಇಂಧನ ಬಳಸಿ ಆಹಾರ ತಯಾರಿಸುವ ಪರಿಕಲ್ಪನೆ, ನಿತ್ಯ ಅನ್ನದಾನ ಮುಂತಾದ ಸಮುದಾಯಹಿತ ಕಾರ್ಯಕ್ರಮಗಳ ಮೂಲಕ ಪರಿಸರ ಹಾಗೂ ಮಾನವೀಯ ಮೌಲ್ಯಗಳನ್ನು ಕಾಪಾಡುವ ಅವರ ಸಮಾಜಮುಖಿ ಸೇವಾ ಕಾರ್ಯಗಳನ್ನು ಸ್ಮರಿಸಲಾಯಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ನೇತೃತ್ವದಲ್ಲಿ ನಡೆಯುತ್ತಿರುವ ಸೇವಾ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿ, ಅವರ ಸೇವಾಪರಂಪರೆಯು ಇತರರಿಗೆ ಮಾದರಿಯಾಗಲಿ, ದೇವರು ಅವರಿಗೆ ಶಕ್ತಿ, ಆಯುಷ್ಯ ಮತ್ತು ಆರೋಗ್ಯ ಕರುಣಿಸಲಿ ಎಂದು ಕಾರ್ಯಕರ್ತರು, ಅಭಿಮಾನಿಗಳು ಹಾರೈಸಿದರು.




**ಅದಮ್ಯ ಚೇತನ ಗೋಡೆ ಪತ್ರಿಕೆ :** ಅದಮ್ಯ ಚೇತನ ಗೋಡೆಪತ್ರಿಕೆಯ ಮಾರ್ಚ್ ತಿಂಗಳ ಸಂಚಿಕೆಯು ಇದೇ ದಿನಾಂಕ ಫೆಬ್ರವರಿ 22ರಂದು ಬಿಡುಗಡೆಯಾಯಿತು. ಈ ಸಂಚಿಕೆಯಲ್ಲಿ ಮಕ್ಕಳನ್ನು ರಂಜಿಸುವ ಮತ್ತು ಜ್ಞಾನವನ್ನು ಹೆಚ್ಚಿಸುವ ಹಲವು ವಿಶೇಷ ವಿಷಯಗಳಿವೆ. ಮಕ್ಕಳು ಕುತೂಹಲದಿಂದ ಓದಿ ಖುಷಿಪಡುವಂತಹ ವಿಷಯಗಳನ್ನು ಸರಳವಾಗಿ ತಿಳಿಸುವುದೇ ಈ ಪತ್ರಿಕೆಯ ವಿಶೇಷತೆ. ಪಠ್ಯಪುಸ್ತಕಗಳ ಹೊರತಾದ ಜ್ಞಾನವನ್ನು ಮಕ್ಕಳಿಗೆ ನೀಡುವ ಮೂಲಕ ಅವರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಪ್ರಯತ್ನವನ್ನು ಅದಮ್ಯ ಚೇತನ ಗೋಡೆಪತ್ರಿಕೆ ಮಾಡುತ್ತಿದೆ.

## ತಿಂಗಳ ವರದಿ
### ( ಫೆಬ್ರವರಿ - ಮಾರ್ಚ್ 2025)

**ಶ್ರದ್ಧೆಯ ಶಿಲ್ಪ ;** ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಅಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಕರ್ನಾಟಕ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳು ದಾವಣಗೆರೆಯ ಜಿಲ್ಲೆಯ ನೀರ್ಥಡಿಯ ದೇವಾಲಯ, ಚೆನ್ನಪಟ್ಟಣ ಸಮೀಪದ ಕೂಡ್ಲೂರಿನ ದೇವಾಲಯ, ಶಿರಸಿಯ ಶಾಲ್ಮಲಿಯ ಸಹಸ್ರಲಿಂಗಗಳ ದೇವಾಲಯ, ಬೆಂಗಳೂರಿನ ನಗರ್ತಪೇಟೆಯ ದೇವಾಲಯವನ್ನು ಪರಿಚಯಿಸಲಾಯಿತು.

**ಹಸಿರು ಭಾನುವಾರ:** ಅದಮ್ಯ ಚೇತನದ ಹಸಿರು ಭಾನುವಾರ ಗಿಡನೆಡುವ ಕಾರ್ಯಕ್ರಮದಲ್ಲಿ ಪ್ರತಿವಾರವೂ ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. 478, 479, 480 ಮತ್ತು 481ನೇ ಭಾನುವಾರಗಳನ್ನು ಕ್ರಮವಾಗಿ ಚಾಮರಾಜ ಪೇಟೆಯ ಸರ್ಕಾರಿ ಕನ್ನಡ ಆಂಗ್ಲ ಪ್ರಾಥಮಿಕ ಶಾಲೆಯ ಆವರಣ, ಕಲಾಸಿಪಾಳ್ಯದ ಎಸ್ ಎಲ್ ಎನ್ ಕಾಲೇಜ್ ಆಫ್ ಆರ್ಟ್ಸ್ & ಕಾಮರ್ಸ್ ಕಾಲೇಜಿನ ಆವರಣ, ಆವಲಹಳ್ಳಿಯ ಶ್ರೀ ಪಟೇಲ್ ಗುಳ್ಳಪ್ಪ ಪ್ರಾಥಮಿಕ ಮತ್ತು ಪ್ರೌಢಶಾಲೆ ಆವರಣ, ಭವಾನಿ ಮಾನೆ ಸರೋವರದ ಆವರಣದಲ್ಲಿ ನಡೆಸಲಾಗಿದ್ದು, ಅದಮ್ಯಚೇತನದ ಕಾರ್ಯಕರ್ತರ ಜೊತೆ ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

## ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ "ರಾಣಿ ಅಬ್ಬಕ್ಕ" ಪ್ರಶಸ್ತಿ



ರಾಣಿ ಅಬ್ಬಕ್ಕ ಪ್ರತಿಷ್ಠಾನ ಮತ್ತು ಜಾರ್ಜ್ ಫರ್ನಾಂಡಿಸ್ ವೇದಿಕೆಗಳು ಮಾರ್ಚ್ 09ರಂದು ಆಯೋಜಿಸಿದ್ದ ರಾಣಿ ಅಬ್ಬಕ್ಕ ಉತ್ಸವದ ಸಾಂಸ್ಕೃತಿಕ ವೈಭವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕದ ಮಾನ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ಯು. ಟಿ. ಖಾದರ್ ಅವರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ರಾಣಿ ಅಬ್ಬಕ್ಕ ಪ್ರಶಸ್ತಿ ನೀಡಿ ಗೌರವಿಸಿದರು.

ಅನಂತಪಥ

Inputs: Poornaprazna / ACF / AKP / GM Inamdar/ Gopal T.S / K. Janardhana Thunga / Trivikram Joshi
Photographs: Gopal TS / Kengeri Chakrapani/ Internet Sources / AKP / ACF/
Acknowledgements: A .G. Laxminarayan, Smt.seema killedar
Printed at: Rashtrothana Mudranalaya, Chamarajpet, Bengaluru
Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ರಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅನಂತ ಚಿತ್ರಸಂಪುಟ

### ಹುಬ್ಬಳ್ಳಿ ಅನಂತ ಪ್ರೇರಣಾ ಕೇಂದ್ರದ ಕೆಲವು ಚಿತ್ರಗಳು












# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅಟಲ್ ಬಿಹಾರಿ ವಾಜಪೇಯಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ ಚಿತ್ರಸಂಗ್ರಹಣ ಅಭಿಯಾನದ ಭಾಗವಾಗಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರನ್ನು ಬಿಜೆಪಿ ಮುಖಂಡರು ಭೇಟಿ ಮಾಡಿದರು



ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ದಿನಾಂಕ 20-03-2025 ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ "ಮಹಿಳಾ ದಿನಾಚರಣೆ" ಕಾರ್ಯಕ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು



ಅದಮ್ಯ ಚೇತನ ಸಂಸ್ಥೆಯು ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಪ್ರತಿದಿನ ಲಕ್ಷಾಂತರ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ನಿರಂತರವಾಗಿ ಒದಗಿಸುತ್ತಿದೆ. ಅಂತಹ ಒಂದು ಸಂದರ್ಭದ ಚಿತ್ರ



ದಿನಾಂಕ 21 -03-2025 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಶ್ರೀರಾಮ ದರ್ಶನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭಾಗವಹಿಸಿದ್ದರು



ಇತ್ತೀಚೆಗೆ ನಡೆದ ಮಹಾಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಲು ತೇಜಸ್ವಿನಿ ಅನಂತಕುಮಾರ್ ಅವರು ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮಕ್ಕೆ ತಮ್ಮ ಕುಟುಂಬದೊಂದಿಗೆ ಭಾಗವಹಿಸಿದ ಸಂದರ್ಭದ ಚಿತ್ರ



ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಸದಸ್ಯರು ಅದಮ್ಯ ಚೇತನದ ಅಡುಗೆ ಮನೆಗೆ ಭೇಟಿ ನೀಡಿದ ಸಂದರ್ಭ



ಜೋಧಪುರದ ಮಹಾತ್ಮ ಗಾಂಧಿ ಆಸ್ಪತ್ರೆಯ ಆವರಣದಲ್ಲಿ ಅದಮ್ಯ ಚೇತನದಿಂದ ನಿರಂತರ ಅನ್ನದಾನ ಸೇವೆ ನಡೆಯುತ್ತಿದೆ



ಅದಮ್ಯ ಚೇತನದ ಹಸಿರು ಭಾನುವಾರ 481ನೇ ಕಾರ್ಯಕ್ರಮ ಭವಾನಿ ಮಾನೆ ಕೆರೆಯಲ್ಲಿ ಯಶಸ್ವಿಯಾಗಿ ನಡೆಯಿತು. ನೂರಾರು ಯುವಕರು, ಕಾರ್ಯಕರ್ತರು, ಸಾರ್ವಜನಿಕರು ಭಾಗವಹಿಸಿದ್ದರು